

**ಬಿ.ಎಸ್.ಯಡಿಯೂರಪ್ಪ**
ಮುಖ್ಯಮಂತ್ರಿ

# ಆಸರೆ:- ವಸ್ತುನಿಷ್ಠ ವರದಿ

ಕಳೆದ ಅಕ್ಟೋಬರ್-ನವೆಂಬರ್-2009ರಲ್ಲಿ ನೆರೆ ಹಾವಳಿಯಿಂದ ಮನೆ-ಮಠ, ಜನ-ಜಾನುವಾರುಗಳನ್ನು ಕಳೆದುಕೊಂಡು ಸಂತ್ರಸ್ತರಾಗಿರುವ ಲಕ್ಷಾಂತರ ಜನತೆಗೆ ತುರ್ತಾಗಿ ಆಹಾರ, ವಸ್ತ್ರ, ಔಷಧಿ ಮತ್ತು ವಸತಿ ಪೂರೈಸಿ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಸಾಂಕ್ರಾಮಿಕ ರೋಗರುಜಿನಗಳು ಹರಡದಂತೆ ನೈರ್ಮಲ್ಯ ವ್ಯವಸ್ಥೆ ಕಾಪಾಡಿಕೊಂಡು ಸರ್ಕಾರ ಪರಿಹಾರ ಮತ್ತು ಪುನರ್‌ವಸತಿ ಕಾರ್ಯದಲ್ಲಿ ನಿರತವಾಗಿದೆ.

ರಾಜ್ಯಕ್ಕೆ ಅನಿರೀಕ್ಷಿತವಾಗಿ ಬಂದೆರಗಿದ ಈ ಶತಮಾನದಲ್ಲೇ ಭೀಕರವೆನಿಸಲ್ಪಟ್ಟ ಪ್ರವಾಹ ತಂದ ಹಾನಿ ಅಪಾರ. ಈ ಬೃಹತ್ ಪ್ರಮಾಣದ ಹಾನಿಯನ್ನು ಸರಿಪಡಿಸಿ, ಪ್ರವಾಹ ಪೀಡಿತ ಪ್ರದೇಶಗಳ ನಮ್ಮ ಬಂಧುಗಳಲ್ಲಿ ಹೊಸ ಭರವಸೆ ಮೂಡಿಸಿ, ಅವರನ್ನು ಸಹಜ ಬದುಕಿನತ್ತ ಸಾಗುವಂತೆ ಮಾಡುವುದು ನಮ್ಮ ಬಹುದೊಡ್ಡ ಜವಾಬ್ದಾರಿಯಾಗಿತ್ತು.

ಅದಕ್ಕನುಗುಣವಾಗಿ ಸರ್ಕಾರ ಪರಿಸ್ಥಿತಿಯ ಗಂಭೀರತೆಯನ್ನು ಮನಗಂಡು ತನ್ನೆಲ್ಲ ಸಂಪನ್ಮೂಲಗಳನ್ನು ಬಳಸಿಕೊಂಡು ಪರಿಹಾರ ಕಾರ್ಯಗಳಲ್ಲಿ ಸಮರೋಪಾದಿಯಲ್ಲಿ ತೊಡಗಿಸಿಕೊಂಡಿತು.

ತದನಂತರ ಈ ಅಗಾಧ ಹಾನಿಯನ್ನು ಸರಿಪಡಿಸಲು ಸರ್ಕಾರ ನೆರವಿನ ಹಸ್ತಕ್ಕಾಗಿ ಸಾರ್ವಜನಿಕರು, ಸಂಘ-ಸಂಸ್ಥೆಗಳು, ಧಾರ್ಮಿಕ ದತ್ತಿ ಸಂಸ್ಥೆಗಳು, ವಾಣಿಜ್ಯೋದ್ಯಮಿಗಳು ಹಾಗೂ ದಾನಿಗಳು ಸೇರಿದಂತೆ ಸಮಾಜದ ಎಲ್ಲ ಸ್ತರಗಳ ಜನತೆಯಲ್ಲಿ ಮನವಿ ಮಾಡಿತು.

ನಮ್ಮ ಮನವಿಗೆ ಸಾರ್ವಜನಿಕರಾದಿಯಾಗಿ ರಾಜ್ಯದ ಎಲ್ಲ ಭಾಗಗಳಿಂದ ಜನತೆ ಸ್ಪಂದಿಸಿದ ಪರಿ ಅದ್ಭುತ-ಅಭೂತಪೂರ್ವ. ಈ ಪರಿಯ ಸ್ಪಂದನವೇ ಸರ್ಕಾರಕ್ಕೆ ಪರಿಹಾರ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಇಮ್ಮಡಿ ಸ್ಫೂರ್ತಿ ನೀಡಿತು.

'ಆಸರೆ' ಹೆಸರಿನಡಿ ಪುನರ್ವಸತಿ ಕಾರ್ಯಕ್ಕೆ ಸರ್ಕಾರ ಸಾರ್ವಜನಿಕರ ಸಹಯೋಗದೊಂದಿಗೆ ಚಾಲನೆ ನೀಡಿತು. ಮಠ ಮಾನ್ಯಗಳು, ಐಟಿ ಕಂಪನಿಗಳು, ವಾಣಿಜ್ಯೋದ್ಯಮಿಗಳು, ಸಂಘ-ಸಂಸ್ಥೆಗಳು, ದಾನಿಗಳು, ಸರ್ಕಾರಿ-ಖಾಸಗಿ ಉದ್ಯೋಗಿಗಳಾದಿಯಾಗಿ ಎಲ್ಲರೂ ಸರ್ಕಾರದ ಈ ಕೈಂಕರ್ಯದಲ್ಲಿ ಉದಾರವಾಗಿ ಕೈ ಜೋಡಿಸಿರುವರು. ಅವರೆಲ್ಲರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಇಂತಹ ಬೃಹತ್ ಪ್ರಮಾಣದ ಪರಿಹಾರ ಪುನರ್‌ವಸತಿ ಕಾರ್ಯಗಳು ಯಶಸ್ವಿಯಾಗಿ ಸಹಜಸ್ಥಿತಿಗೆ ಮರಳಲು ಸಾಮಾನ್ಯವಾಗಿ 2-3 ವರ್ಷಗಳೇ ಬೇಕಾಗುವುವು. ಆದರೆ ನಮ್ಮ ಸರ್ಕಾರ ಕೇವಲ 8 ತಿಂಗಳ ಅವಧಿಯಲ್ಲೇ ಈ ಕಾರ್ಯದಲ್ಲಿ ಈಗಾಗಲೇ ಸಾಕಷ್ಟು ಪ್ರಗತಿಯಾಗಿದೆ ಎಂದು ಹೇಳಲು ಹೆಮ್ಮೆಯೆನಿಸುತ್ತದೆ.

ಪರಿಹಾರ ಮತ್ತು ಪುನರ್‌ವಸತಿ ಕಾರ್ಯಗಳ ಅನುಷ್ಠಾನದಲ್ಲಿ ಸರ್ಕಾರ ತೋರಿದ ಬದ್ಧತೆ, ಪ್ರಾಮಾಣಿಕತೆ ಮತ್ತು ನಿರಂತರತೆಗೆ ಈ ಸಾಫಲ್ಯ ಸಾಕ್ಷಿಯಾಗಿದೆ.

ಆದರೆ ಸರ್ಕಾರವು ಪರಿಹಾರ ಕಾರ್ಯಗಳಲ್ಲಿ ಇದುವರೆಗೂ ಸಲ್ಲಿಸಿರುವ ಗಮನಾರ್ಹ ಪ್ರಗತಿಯಿಂದ ತೃಪ್ತಿಪಟ್ಟುಕೊಂಡು ಕುಳಿತಿಲ್ಲ. ಇನ್ನೂ ಪೂರೈಸಲು ಬಾಕಿ ಉಳಿದಿರುವ ಕಾಮಗಾರಿಗಳ ಬಗ್ಗೆ ಸರ್ಕಾರಕ್ಕೆ ಸಂಪೂರ್ಣ ಅರಿವಿದೆ. ಪುನರ್‌ವಸತಿ ಕಾರ್ಯಗಳ ಅನುಷ್ಠಾನದ ವೇಗಕ್ಕೆ ಚ್ಯುತಿ ಉಂಟಾಗದಂತೆ ತನ್ನ ಬದ್ಧತೆಯನ್ನು ಅದು ಮುಂದುವರಿಸಿದೆ. ಸರ್ಕಾರವು 'ಆಸರೆ' ಹೆಸರಿನಲ್ಲಿ ಕೈಗೊಂಡಿರುವ ಬೃಹತ್ ಪ್ರಮಾಣದ ಪರಿಹಾರ ಮತ್ತು ಪುನರ್‌ವಸತಿ ಕಾರ್ಯಗಳನ್ನು ಶೀಘ್ರದಲ್ಲೇ ಯಶಸ್ವಿಯಾಗಿ ಪೂರೈಸಲಾದೆ ಎಂದು ಸ್ಪಷ್ಟ ಭರವಸೆ ನೀಡಬಯಸುತ್ತೇನೆ.

ದಿನಾಂಕ: ಜೂನ್ 28, 2010



**ಶ್ರೀ ಜಿ. ಕರುಣಾಕರ ರೆಡ್ಡಿ**
ಸನ್ಮಾನ್ಯ ಕಂದಾಯ ಸಚಿವರು

# ಆಸರೆ:– ವಸ್ತುನಿಷ್ಠ ವರದಿ

ಪ್ರಪಂಚ ಕಾಣದಂತಹ ಪ್ರವಾಹವು ನಮ್ಮ ರಾಜ್ಯದಲ್ಲಿ ಉಂಟುಮಾಡಿದ್ದು, ಹಾನಿಯನ್ನು ಸಮರೋಪಾದಿಯಲ್ಲಿ ನಮ್ಮ ಸರ್ಕಾರವು ತಯಾರಿಗಳನ್ನು ಮಾಡಿ ಬಹುಸಂಖ್ಯೆಯಲ್ಲಿ ಆಗಬಹುದಾದ ಜೀವಹಾನಿಯನ್ನು ತಪ್ಪಿಸಿ, ಸಂತ್ರಸ್ತರಿಗೆ ತಕ್ಷಣ ಪರಿಹಾರ ನೀಡಿ, ತಾತ್ಕಾಲಿಕ ವಸತಿ ಊಟೋಪಚಾರದ ವ್ಯವಸ್ಥೆ ಮಾಡಿದ್ದಲ್ಲದೆ, ಸುಮಾರು 62,910 ಕುಟುಂಬಗಳಿಗೆ ಮನೆ ನಿರ್ಮಾಣದ ಕಾರ್ಯಯೋಜನೆ ರೂಪಿಸಿ "ಆಸರೆ" ಯೋಜನೆಯನ್ನು ಜಾರಿಗೆ ತರಲಾಗಿದೆ. ಅನೇಕ ದಾನಿಗಳು ಮುಂದೆ ಬಂದು ಅವರೇ ಸ್ವತಃ ಮನೆ ನಿರ್ಮಾಣಕ್ಕೆ ಸನ್ನದ್ಧರಾಗಿದ್ದಾರೆ. ಅನೇಕರು ಮನೆ ನಿರ್ಮಾಣಕ್ಕೆ ವಿವಿಧ ರೀತಿಯ ಸಹಾಯ ನೀಡಿರುತ್ತಾರೆ.

ಸರ್ಕಾರವು ಈ ಮಟ್ಟದ ಮನೆ ನಿರ್ಮಾಣಕ್ಕೆ ಜಮೀನು ಖರೀದಿಗೆ ವಿಶೇಷ ರೀತಿಯ ಕಾರ್ಯ ಯೋಜನೆ ರೂಪಿಸಿ ಜಮೀನು ಹೆಚ್ಚಿನ ಕಡೆ ಖರೀದಿಸಿ, ಬಡಾವಣೆಯನ್ನು ನಿರ್ಮಿಸಿ, ಮನೆ ನಿರ್ಮಾಣದ ಕಾರ್ಯ ಭರದಿಂದ ನಡೆಯುತ್ತಿದೆ.

ಈ ಕಾರ್ಯಕ್ರಮದ ಯಶಸ್ಸು ಹೆಚ್ಚಾಗಿ ಸಂತ್ರಸ್ಥರು, ಎಲ್ಲಾ ಹೂಡಿಕೆದಾರರ, ಸ್ಥಳೀಯ ಸಂಸ್ಥೆಗಳ ಎಲ್ಲಾ ಜನನಾಯಕರ, ವಿವಿಧ ಮಟ್ಟದ ಸರ್ಕಾರಿ ಸಿಬ್ಬಂದಿಗಳ ನಿಷ್ಠಳವಾದ ಸಹಕಾರದ ಮೇಲೆ ಅವಲಂಬಿಸಿದ್ದು, ಅವರೆಲ್ಲರ ಸಹಕಾರವನ್ನು ಬಯಸಿದೆ.

G. Karunakara Reddy

ದಿನಾಂಕ: ಜೂನ್ 28, 2010

(ಜಿ. ಕರುಣಾಕರ ರೆಡ್ಡಿ)

# 'ಆಸರೆ' - ವಸ್ತುನಿಷ್ಠ ಪ್ರಗತಿ ವರದಿ

**ಉತ್ತರ ಕರ್ನಾಟಕದ 15 ಜಿಲ್ಲೆಗಳ ನೆರೆ ಸಂತ್ರಸ್ತರಿಗೆ ಪರಿಹಾರ ಮತ್ತು ಪುನರ್ವಸತಿ ಯೋಜನೆ - 'ಆಸರೆ'**



- ಕರ್ನಾಟಕ ರಾಜ್ಯವು ಕಳೆದ ಅಕ್ಟೋಬರ್-ನವೆಂಬರ್ 2009ರಲ್ಲಿ ಹಿಂದೆಂದೂ ಕಾಣದಂತಹ ಅತ್ಯಂತ ಭೀಕರವಾದ ಪ್ರವಾಹಕ್ಕೀಡಾಯಿತು. ಉತ್ತರ ಕರ್ನಾಟಕದ 14 ಜಿಲ್ಲೆಗಳು ಈ ಪ್ರವಾಹದ ಭೀಕರತೆಗೆ ತತ್ತರಿಸಿದವು. ಜನ-ಜಾನುವಾರುಗಳ ಜೀವಹಾನಿ, ಅಪಾರ ಆಸ್ತಿ-ಪಾಸ್ತಿ ನಷ್ಟವೂ ಸೇರಿದಂತೆ ಸುಮಾರು ಎರಡು ಕೋಟಿ ಜನ ಸಂಕಷ್ಟಕ್ಕೆ ಈಡಾಗಿದ್ದಾರೆ. ವಿಪತ್ತಿನ ವ್ಯಾಪ್ತಿ, ಸ್ವರೂಪ ಮತ್ತು ಪರಿಣಾಮದ ತೀವ್ರತೆಗಳಿಂದಾಗಿ ಸಹಜವಾಗಿಯೇ ಈ ನೆರೆಹಾವಳಿಯನ್ನು **"ಶತಮಾನದ ಭೀಕರ ದುರಂತ"** ಎಂದೇ ಇದನ್ನು ಪರಿಗಣಿಸಬಹುದಾಗಿದೆ.
- ಈ ತೀವ್ರ ಸ್ವರೂಪದ ಜಲಪ್ರಳಯದಿಂದ ಸಂಭವಿಸಿದ ಹಾನಿ ಅಗಾಧ. ಇಂತಹ ಕಠಿಣ ಮತ್ತು ತುರ್ತು ಸಂದರ್ಭದಲ್ಲಿ ರಕ್ಷಣೆ, ಪರಿಹಾರ ಮತ್ತು ಪುನರ್ವಸತಿ ಕಲ್ಪಿಸುವ ಬೃಹತ್ ಕಾರ್ಯ ಯಾವುದೇ ಸರ್ಕಾರಕ್ಕೆ ದೊಡ್ಡ ಸವಾಲೇ ಸರಿ!
- ಪ್ರವಾಹ ದುರ್ಘಟನೆ ಸಂಭವಿಸಿದ ಕೂಡಲೇ ಮುಖ್ಯಮಂತ್ರಿಯವರು ಹಾಗೂ ಎಲ್ಲಾ ಜಿಲ್ಲಾ ಉಸ್ತುವಾರಿ ಮಂತ್ರಿಗಳು ರಕ್ಷಣೆ ಮತ್ತು ಪರಿಹಾರ ಕಾರ್ಯಗಳಿಗೆ ಧಾವಿಸಿ ಬಂದರು. ಸರ್ಕಾರದ ವತಿಯಿಂದ ಸಂತ್ರಸ್ತರಿಗೆ ಪರಿಹಾರವನ್ನು ವಿತರಿಸುವ ಕಾರ್ಯಕ್ರಮಕ್ಕೆ ತಕ್ಷಣವೇ ಚಾಲನೆ ನೀಡಿದರು.
- ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ತುರ್ತು ಸಭೆ ನಡೆಸಲಾಯಿತು. ಸೇನೆ, ನೌಕಾದಳ, ವಾಯುಪಡೆ, ಪೊಲೀಸ್, ಗೃಹ ರಕ್ಷಕ ದಳ, ಅಗ್ನಿಶಾಮಕ ದಳ ಮತ್ತು ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳ ನೆರವಿನೊಂದಿಗೆ ಪ್ರವಾಹದಲ್ಲಿ ಸಿಲುಕ್ಕಿದವರ ರಕ್ಷಣಾ ಕಾರ್ಯಕ್ಕೆ ತಕ್ಷಣದಿಂದಲೇ ಚಾಲನೆ ನೀಡಲಾಯಿತು.



- ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಮಾನ್ಯ ಮುಖ್ಯಮಂತ್ರಿಯವರು ಸಂಚರಿಸಿ ರಕ್ಷಣೆ ಮತ್ತು ಪರಿಹಾರ ಕಾರ್ಯಗಳ ನೇತೃತ್ವ ವಹಿಸಿದರು. ನೆರೆಹಾವಳಿ ಸಂಭವಿಸಿದ ಸಂದರ್ಭದಲ್ಲಿ ಸತತವಾಗಿ 27 ದಿನಗಳು ಆ ಪ್ರದೇಶಗಳಲ್ಲಿ ಪ್ರವಾಸ ಕೈಗೊಂಡು ವಾಸ್ತವ್ಯವನ್ನೂ ಮಾಡಿದ್ದಾರೆ. ಅಲ್ಲದೇ ಆಯಾ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಉಸ್ತುವಾರಿ ಕಾರ್ಯದರ್ಶಿಗಳೂ ಕೂಡಾ ರಕ್ಷಣೆ ಮತ್ತು ಪರಿಹಾರ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿ ಕೊಂಡಿರುವರು.

## ರಾಜ್ಯ ಸರ್ಕಾರ ವಿವಿಧ ಹಂತಗಳಲ್ಲಿ ಕೈಗೊಂಡ ಕ್ರಮಗಳು

**ರಕ್ಷಣಾ ಕಾರ್ಯಗಳು :**

- ವಾಯುಪಡೆಯ 10 ಹೆಲಿಕಾಪ್ಟರ್‌ಗಳು ಮತ್ತು 5 ವಿಮಾನಗಳು, ನೌಕಾದಳದ 329 ದೋಣಿಗಳನ್ನು ಬಳಸಿ ಪುಣೆ ಹಾಗೂ ಅರಕೋಣಂನ ಎನ್‌ಡಿಆರ್‌ಎಫ್‌ನ ಒಟ್ಟು 300 ಮಂದಿ ಬಳ್ಳಾರಿ, ಗದಗ, ಬಿಜಾಪುರ, ಬಾಗಲಕೋಟೆ ಮತ್ತು ರಾಯಚೂರು ಜಿಲ್ಲೆಗಳಲ್ಲಿ ರಕ್ಷಣಾ ಕಾರ್ಯದಲ್ಲಿ ತೊಡಗಿಕೊಂಡರು.
- ಅಲ್ಲದೆ ಸ್ಥಳೀಯ ಸ್ವಯಂ ಸೇವಕರು ಮತ್ತು ನುರಿತ ಈಜುಗಾರರೂ ಕೂಡಾ ರಕ್ಷಣೆ ಕಾರ್ಯಕ್ಕೆ ನೆರವಾದರು.



- ಪ್ರವಾಹಪೀಡಿತ ಪ್ರದೇಶಗಳಲ್ಲಿ ಮನೆ ಛಾವಣಿ ಹಾಗೂ ಮರಗಳ ಮೇಲೆ ಆಶ್ರಯ ಪಡೆದಿದ್ದ ಒಟ್ಟು 5,191 ಜನರನ್ನು ರಕ್ಷಿಸಲಾಯಿತು.
- ರಕ್ಷಣಾ ಕಾರ್ಯ ಕೈಗೊಳ್ಳುವ ಸಂದರ್ಭದಲ್ಲಿ ಯಾವುದೇ ಸಾವು-ನೋವು ಸಂಭವಿಸದಂತೆ ಜಾಗ್ರತೆ ವಹಿಸಲಾಗಿತ್ತು.

**ಪ್ರವಾಹದಿಂದ ಆದ ಹಾನಿಯ ಪಕ್ಷಿನೋಟ**

| | | |
|---|---|---|
| | ಜೀವಹಾನಿ | |
| 1 | ನಾಗರೀಕರು | 229 |
| 2 | ಜಾನುವಾರುಗಳು | 7,882 |
| | ಆಸ್ತಿ-ಪಾಸ್ತಿ ನಷ್ಟ | |
| 3 | ಹಾನಿಗೊಳಗಾದ ಮನೆಗಳು | 6.55 ಲಕ್ಷ |
| 4 | ನಾಶವಾದ ಬೆಳೆಗಳು | 22 ಲಕ್ಷ ಹೆಕ್ಟೇರ್ |
| 5 | ಹಾನಿಗೊಂಡ ರಸ್ತೆಗಳು | 29,613 ಕಿ.ಮೀ |
| 6 | ಹಾನಿಗೊಂಡ ಸೇತುವೆಗಳು | 5,240 |
| 7 | ಹಾನಿಗೊಳಗಾದ ನೀರಾವರಿ ಕೆರೆಗಳು | 799 |
| 8 | ಬೃಹತ್ ನೀರಾವರಿ ಕಾಮಗಾರಿಗಳು | 2,014 |
| 9 | ವಿದ್ಯುತ್ ಸರಬರಾಜು ಘಟಕಗಳು | 1.15 ಲಕ್ಷ |
| | **ಒಟ್ಟಾರೆ ಸಂಭವಿಸಿದ ನಷ್ಟ** | **18,568 ಕೋಟಿ ರೂ.** |



- ಪರಿಹಾರ ಹಾಗೂ ಪುನರ್ವಸತಿ ಕಾರ್ಯಗಳಿಗೆ ಹಣ ಬಿಡುಗಡೆ ಮತ್ತು ಪರಿಹಾರ ಕ್ರಮಗಳಿಗೆ ಸಂಬಂಧಿಸಿದ ಆದೇಶ ಹಾಗೂ ಸುತ್ತೋಲೆಗಳನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ಮೌಖಿಕವಾಗಿ ಹಾಗೂ ಆನ್‌ಲೈನ್ ವ್ಯವಸ್ಥೆಯಲ್ಲಿ ಅತಿ ಶೀಘ್ರವಾಗಿ ರವಾನಿಸಲಾಗಿದೆ. ಇದರಿಂದ ಜಿಲ್ಲಾಡಳಿತ ಶೀಘ್ರ ಪರಿಹಾರ ಮತ್ತು ಪುನರ್ವಸತಿ ಕ್ರಮಕೈಗೊಳ್ಳಲು ಸಾಧ್ಯವಾಯಿತು.

ಬೆಂಗಳೂರಿನಿಂದ ವಿಡಿಯೋ ಕಾನ್‌ಫರೆನ್ಸ್ ವ್ಯವಸ್ಥೆ ಮೂಲಕ ಪ್ರವಾಹ ಪೀಡಿತ ಜಿಲ್ಲೆಗಳ ಜಿಲ್ಲಾಧಿಕಾರಿ, ಸಿ.ಇ.ಓ ಮತ್ತು ಎಸ್.ಪಿ.ಗಳ ಜೊತೆ, ಮಾನ್ಯ ಮುಖ್ಯಮಂತ್ರಿಯವರು, ಮಾನ್ಯ ಕಂದಾಯ ಮಂತ್ರಿಗಳು ಮತ್ತು ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಆಗಿಂದಾಗ್ಗೆ ನಿಯಮಿತವಾಗಿ ಸಂಪರ್ಕವಿರಿಸಿಕೊಂಡು ಪರಿಹಾರ ಕಾರ್ಯಗಳ ಪರಿಶೀಲನೆ ಮಾಡಿರುತ್ತಾರೆ. ಅಗತ್ಯಬಿದ್ದಾಗ ಮಾರ್ಗದರ್ಶನ ನೀಡುವುದರ ಜೊತೆಗೆ ಅಧಿಕಾರಿಗಳಲ್ಲಿ ಉಂಟಾಗುತ್ತಿದ್ದ ಸಂಶಯ ಮತ್ತು ಸಮಸ್ಯೆಗಳ ನಿವಾರಣೆಗೆ ಕ್ರಮ ಕೈಗೊಳ್ಳಲಾಗಿದೆ.

**ತುರ್ತು ಪರಿಹಾರ ಕ್ರಮಗಳು**



- ಹೆಲಿಕಾಪ್ಟರ್ ಮತ್ತು ವಿಮಾನಗಳ ಮೂಲಕ 25 ಲಕ್ಷ ನೀರು ಮತ್ತು ಆಹಾರ ಪೊಟ್ಟಣಗಳನ್ನು ಸರಬರಾಜು ಮಾಡಲಾಯಿತು.
- ಸಂತ್ರಸ್ತರ ಪ್ರತಿ ಕುಟುಂಬಕ್ಕೆ 20 ಕೆಜಿ ಅಕ್ಕಿ, 10 ಕೆಜಿ ಗೋಧಿ, 5 ಕೆಜಿ ಸಕ್ಕರೆ, 1 ಕೆಜಿ ತೊಗರಿಬೇಳೆ ಮತ್ತು 5 ಲೀಟರ್ ಸೀಮೆ ಎಣ್ಣೆ ಇರುವ ಕಿಟ್‌ಗಳನ್ನು ಒದಗಿಸಲಾಯಿತು.



- ಒಟ್ಟು 1,715 ಪರಿಹಾರ ಕೇಂದ್ರಗಳನ್ನು (ಗಂಜಿಕೇಂದ್ರ) ತೆರೆದು 7,65,623 ಸಂತ್ರಸ್ತರಿಗೆ ತಕ್ಷಣದ ಪುನರ್ವಸತಿ ಮತ್ತು ಆಹಾರ ಒದಗಿಸಲಾಯಿತು.
- ಪ್ರವಾಹಪೀಡಿತ ಪ್ರದೇಶಗಳಲ್ಲಿ 200 ಸಂಚಾರಿ ಆಸ್ಪತ್ರೆಗಳನ್ನು ಪ್ರಾರಂಭಿಸಿ ಶುದ್ಧ ಕುಡಿಯುವ ನೀರು ಹಾಗೂ ಅಗತ್ಯ ಔಷಧಿಗಳನ್ನು ಒದಗಿಸಲಾಯಿತು.
- ಸುಮಾರು 7 ಲಕ್ಷ ಕುಟುಂಬಗಳು ಪ್ರವಾಹದಿಂದ ತೊಂದರೆಗೊಳಗಾಗಿದ್ದು ಈ ಕುಟುಂಬಗಳಲ್ಲಿ ಯಾರೂ ಕೂಡಾ ಹಸಿವು ಮತ್ತು ಸಾಂಕ್ರಾಮಿಕ ರೋಗದಿಂದ ಸಾವಿಗೀಡಾಗದಂತೆ ನೋಡಿಕೊಳ್ಳಲಾಯಿತು.
- ಗ್ರಾಮಗಳ ನೈರ್ಮಲ್ಯ ಕಾಪಾಡಲು ಪ್ರತಿ ಗ್ರಾಮ ಪಂಚಾಯ್ತಿಗೆ 2 ಲಕ್ಷ ರೂ.ಗಳಂತೆ ಅನುದಾನ ಬಿಡುಗಡೆ ಮಾಡಿ ಪ್ರವಾಹ ಪೀಡಿತ ಗ್ರಾಮಗಳಲ್ಲಿ ಸೇರಿಕೊಂಡಿದ್ದ ಕೆಸರು, ಕಸ, ಕಲ್ಲು–ಮಣ್ಣು, ಸತ್ತ ಪ್ರಾಣಿಗಳ ದೇಹಗಳೂ ಸೇರಿ ತ್ಯಾಜ್ಯ ವಸ್ತುಗಳನ್ನು ತೆಗೆದುಹಾಕಿ ನೈರ್ಮಲ್ಯ ಕಾಪಾಡಲಾಯಿತು. ಇದರಿಂದ ಸಾಂಕ್ರಾಮಿಕ ರೋಗ ಹಬ್ಬಲು ಅವಕಾಶವಾಗಲಿಲ್ಲ.



- ಬಿದ್ದು ಹೋಗಿದ್ದ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸಿ ಸುಟ್ಟು ಹೋಗಿದ್ದ ಟ್ರಾನ್ಸ್‌ಫಾರ್ಮ್‌ರ್‌ಗಳನ್ನು ದುರಸ್ತಿಪಡಿಸಿ ವಿದ್ಯುತ್ ಮರು ಸಂಪರ್ಕ ಏರ್ಪಡಿಸಲಾಯಿತು.
- ಹಾನಿಗೊಳಗಾದ ರಸ್ತೆ ಮತ್ತು ಸೇತುವೆಗಳನ್ನು ದುರಸ್ತಿಪಡಿಸಿ ಸಂಪರ್ಕ ಕಲ್ಪಿಸಲಾಯಿತು.
- ಮನೆಗಳನ್ನು ಕಳೆದುಕೊಂಡ ಸಂತ್ರಸ್ತರನ್ನು ಶಾಲೆ, ಕಾಲೇಜು, ದೇವಾಲಯ ಮತ್ತು ಧರ್ಮಶಾಲೆಗಳಲ್ಲಿ ತಾತ್ಕಾಲಿಕವಾಗಿ ನೆಲೆಗೊಳಿಸಲಾಯಿತು.
- ಒಟ್ಟು 8,309 ತಾತ್ಕಾಲಿಕ ಷೀಟ್ ಮನೆಗಳನ್ನು ನಿರ್ಮಿಸಿ ಅಲ್ಲಿ ಸಂತ್ರಸ್ತರ ಕುಟುಂಬಗಳು ತಂಗಲು ವ್ಯವಸ್ಥೆ ಮಾಡಲಾಯಿತು.
- ಒಟ್ಟು 3,80,181 ನೆರೆಪೀಡಿತರಿಗೆ ಉಡುಪು ಮತ್ತು ಬೆಚ್ಚನೆಯ ಹೊದಿಕೆಗಳನ್ನು ಒದಗಿಸಲಾಯಿತು.

**ಮಧ್ಯಂತರ ಪರಿಹಾರ ಕ್ರಮಗಳು**



- ಅತಿವೃಷ್ಟಿ ಮತ್ತು ಪ್ರವಾಹಪೀಡಿತ 14 ಜಿಲ್ಲೆಗಳಲ್ಲಿ ಜೀವಹಾನಿ, ಮನೆ ಮತ್ತು ಬೆಳೆಗಳ ಹಾನಿ ಪ್ರಕರಣಗಳಲ್ಲಿ ಶೀಘ್ರ ಅಂದಾಜು ಮಾಡಿ ಪರಿಹಾರದ ಮೊತ್ತದ ಚೆಕ್‌ಗಳನ್ನು ವಿತರಿಸಲಾಯಿತು.
- ಮಾನವ ಜೀವಹಾನಿಯಾದ ಕುಟುಂಬಗಳಿಗೆ ಶೇಕಡ 100ರಷ್ಟು ಪ್ರಕರಣಗಳಲ್ಲಿ ಪರಿಹಾರ ವಿತರಿಸಲಾಗಿದೆ. ಇದಕ್ಕೆ 2.29 ಕೋಟಿ ರೂ. ವೆಚ್ಚವಾಗಿದೆ.
- ಜಾನುವಾರುಗಳ ಸಾವಿನ ಪ್ರಕರಣಗಳಲ್ಲಿಯೂ ಶೇ.100ರಷ್ಟು ಪರಿಹಾರ ಕೊಡಲಾಗಿದೆ. ಇದಕ್ಕೆ 2.30 ಕೋಟಿ ರೂ. ವೆಚ್ಚವಾಗಿದೆ.
- ಹಾನಿಗೊಳಗಾದ ಕುಡಿಯುವ ನೀರು ಸರಬರಾಜು ಯೋಜನೆಗಳಲ್ಲಿ ಶೇ.99ರಷ್ಟು ಸರಿಪಡಿಸಲಾಗಿದೆ.




- ಹಾನಿಗೊಳಗಾದ ವಿದ್ಯುತ್ ಸರಬರಾಜು ಮಾರ್ಗಗಳಲ್ಲಿ ಶೇ.95ರಷ್ಟು ದುರಸ್ತಿಪಡಿಸಲಾಗಿದೆ.
- ಹಾನಿಗೊಳಗಾದ ಶಾಲಾ ಮತ್ತು ಅಂಗನವಾಡಿ ಕಟ್ಟಡಗಳನ್ನು ಬಹುತೇಕ ದುರಸ್ತಿ ಮಾಡಲಾಗಿದೆ.
- ಬೆಳೆ ಹಾನಿಗೆ ಸಂಬಂಧಿಸಿದಂತೆ (14,17,433 ಹೆಕ್ಟೇರ್) 362.45 ಕೋಟಿ ರೂ.ಗಳ ಪರಿಹಾರವನ್ನು ವಿತರಿಸಲಾಗಿದೆ.
- ಹಾನಿಗೊಳಗಾದ 6,93,285 ಮನೆಗಳ ಸಮೀಕ್ಷೆ ಮುಗಿಸಿ 511.56 ಕೋಟಿ ರೂ. ಪರಿಹಾರ ವಿತರಿಸಲಾಗಿದೆ.
- ಹಾನಿಗೊಳಗಾದ ಮೂಲಭೂತ ಸೌಕರ್ಯಗಳನ್ನು ದುರಸ್ತಿಪಡಿಸಲು 30,149 ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಇದಕ್ಕೆ 589.61 ಕೋಟಿ ರೂ. ವೆಚ್ಚವಾಗಿದೆ.
- ಒಟ್ಟು ಪರಿಹಾರ ಕಾರ್ಯಕ್ರಮಗಳಿಗೆ 14 ಜಿಲ್ಲೆಗಳಿಗೆ 1,858.21 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದು ಜಿಲ್ಲಾಡಳಿತ 1787.00 ಕೋಟಿ ರೂ. ವೆಚ್ಚದಲ್ಲಿ ಪರಿಹಾರ ಕ್ರಮಗಳನ್ನು 14 ಜಿಲ್ಲೆಗಳಲ್ಲಿಯೂ ಕೈಗೊಂಡಿವೆ .



**ಪೂರಕ ಕ್ರಮಗಳು :–**

**ನೆರವು ಕೋರಿ ಕೇಂದ್ರಕ್ಕೆ ಸಲ್ಲಿಸಿದ ಮನವಿ ಮತ್ತು ಬಿಡುಗಡೆಯಾದ ಹಣ:**

- ವಿಪತ್ತು ಸಂಭವಿಸಿದ ಕೇವಲ ಎರಡೇ ದಿನಗಳಲ್ಲಿ ಕೇಂದ್ರ ಗೃಹ ಸಚಿವರು, ಕೃಷಿ ಸಚಿವರು ಮತ್ತು ಪ್ರಧಾನ ಮಂತ್ರಿಗಳಿಗೆ ಹಾನಿ ಬಗ್ಗೆ ವಿವರಗಳನ್ನು ಸಲ್ಲಿಸಿ ಹಣಕಾಸಿನ ನೆರವನ್ನು ಕೋರಲಾಯಿತು.
- ಕೇಂದ್ರದ ನೆರವಿಗೆ ಕಾಯದೆ 3.10.2009ರಂದು ರಾಜ್ಯ ಸರ್ಕಾರ 205 ಕೋಟಿ ರೂ.ಗಳನ್ನು ರಕ್ಷಣೆ ಮತ್ತು ಪರಿಹಾರ ಕಾರ್ಯಗಳಿಗೆ ಬಿಡುಗಡೆ ಮಾಡಿತು.



- ಮಾನ್ಯ ಕೇಂದ್ರ ಗೃಹ ಸಚಿವರು 5.10.2009 ರಂದು ಬಳ್ಳಾರಿಗೆ ಆಗಮಿಸಿದಾಗ ರಾಜ್ಯ ಸರ್ಕಾರ ಮನವಿ ಸಲ್ಲಿಸಿತು.
- ಮಾನ್ಯ ಪ್ರಧಾನ ಮಂತ್ರಿಗಳು 10.10.2009ರಂದು ಪ್ರವಾಹಪೀಡಿತ ಪ್ರದೇಶಗಳ ಸಮೀಕ್ಷೆಗಾಗಿ ರಾಯಚೂರಿಗೆ ಬಂದಾಗ ಮತ್ತೊಂದು ವಿವರವಾದ ಮನವಿ ಸಲ್ಲಿಸಿ ಕೇಂದ್ರದಿಂದ ಆರ್ಥಿಕ ನೆರವನ್ನು ಕೋರಲಾಯಿತು. ಆಗ ನೆರೆ ಪರಿಸ್ಥಿತಿ ನಿರ್ವಹಣೆ ಮತ್ತು ಪರಿಹಾರ ಕಲ್ಪಿಸುವಲ್ಲಿ ರಾಜ್ಯ ಸರ್ಕಾರ ಕೈಗೊಂಡಿರುವ ತಕ್ಷಣದ ಕ್ರಮಗಳನ್ನು ಮಾನ್ಯ ಪ್ರಧಾನ ಮಂತ್ರಿಗಳು ಮುಕ್ತವಾಗಿ ಪ್ರಶಂಸೆ ಮಾಡಿದರು. ಅಲ್ಲದೆ 1 ಸಾವಿರ ಕೋಟಿ ರೂ.ಗಳ ಮಧ್ಯಂತರ ನೆರವನ್ನು ಘೋಷಿಸಿದರು.



- ಅತಿವೃಷ್ಟಿ ಮತ್ತು ಪ್ರವಾಹ ಉಂಟಾದ ಕೇವಲ ಎರಡು ವಾರಗಳ ಅಲ್ಪ ಅವಧಿಯಲ್ಲೇ ಹಾನಿಯ ಅಂದಾಜು ವಿವರಗಳನ್ನೊಳಗೊಂಡಂತೆ ಸಮಗ್ರವಾದ ಮೆಮೊರಾಂಡಂ ಸಿದ್ಧಪಡಿಸಿ ಮುಖ್ಯಮಂತ್ರಿಗಳ ನಿಯೋಗ ನವದೆಹಲಿಗೆ ತೆರಳಿ ಪ್ರಧಾನಿ, ಗೃಹ ಮತ್ತು ಹಣಕಾಸು ಸಚಿವರಿಗೆ ಸರ್ಕಾರಕ್ಕೆ ಸಲ್ಲಿಸಲಾಯಿತು. ಕೃಷಿ ಸಚಿವರಿಗೆ ಮತ್ತೊಂದು ಮನವಿ ಪತ್ರವನ್ನು ಕಂದಾಯ ಮಂತ್ರಿಗಳು ಸಲ್ಲಿಸಿದರು.
- ಕೇಂದ್ರದ ಅಧ್ಯಯನ ತಂಡ 20.10.2009ರಂದು ರಾಜ್ಯಕ್ಕೆ ಭೇಟಿ ನೀಡಿ ಪ್ರವಾಹಪೀಡಿತ ಪ್ರದೇಶಗಳಲ್ಲಿ ಸಂಚರಿಸಿ ವಿವರ ಸಂಗ್ರಹಿಸಿತು. ಜೊತೆಗೆ ರಾಜ್ಯ ಸರ್ಕಾರ ಪ್ರವಾಹದಿಂದ ಆಗಿರುವ ಹಾನಿ ಬಗ್ಗೆ ಸಿದ್ಧಪಡಿಸಿರುವ ವರದಿ ಮತ್ತು ಅಂದಾಜುಗಳು ಸಮರ್ಪಕವಾಗಿರುವ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿತು.



- **ಇಂದಿರಾ ಆವಾಜ್ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರಕ್ಕೆ ಎರಡು ಲಕ್ಷ ಹೆಚ್ಚುವರಿ ಮನೆಗಳನ್ನು ಮಂಜೂರು ಮಾಡಲು ನಾವು ಕೋರಿದ್ದೆವು. ಆದರೆ ಕೇಂದ್ರ ಸರ್ಕಾರ ಮಂಜೂರು ಮಾಡಿದ್ದು ಕೇವಲ 7,437 ಮನೆಗಳನ್ನು ಮಾತ್ರ. ಈ ಸಂಬಂಧ ದಿನಾಂಕ 23.11.2009ರಂದು ಆದೇಶ ಹೊರಡಿಸಿದೆ.**
- ರಾಜ್ಯ ಸರ್ಕಾರ ಪರಿಹಾರ ಕಾರ್ಯಗಳಿಗೆ ಇದುವರೆಗೂ 2033.25 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ.
- ಕೇಂದ್ರ ಸರ್ಕಾರವು ಇದುವರೆಗೂ 1698.88 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ.
- ಸರ್ಕಾರ ವಿತರಿಸಿದ ಪರಿಹಾರದ ಚೆಕ್ಕುಗಳನ್ನು ಯಾವುದೇ ತೊಂದರೆಯಿಲ್ಲದೆ ಮತ್ತು ತಕ್ಷಣ ನಗದು ಮಾಡಿಕೊಳ್ಳಲು ಫಲಾನುಭವಿಗಳಿಗೆ ನೆರವಾಗುವಂತೆ ಯಾವುದೇ ಡಿಪಾಸಿಟ್ ತೆಗೆದುಕೊಳ್ಳದೆ ಬ್ಯಾಂಕ್‌ಗಳು ಖಾತೆಗಳನ್ನು ತೆರೆಯಲು ಬ್ಯಾಂಕ್ ಅಧಿಕಾರಿಗಳೊಂದಿಗೆ ಚರ್ಚಿಸಿ ವ್ಯವಸ್ಥೆ ಮಾಡಲಾಯಿತು.



ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನಲ್ಲಿ ಪುನರ್‌ನಿರ್ಮಿತವಾಗುತ್ತಿರುವ ರಂಕಲಕೊಪ್ಪ ಗ್ರಾಮ

- ಕೇವಲ ಎರಡು ತಿಂಗಳ ಅವಧಿಯಲ್ಲಿ ಪ್ರವಾಹ ಸಂದರ್ಭದಲ್ಲಿ ಬೆಳೆ ಮತ್ತು ಮನೆಗಳ ಹಾನಿಗೆ ಸಂಬಂಧಿಸಿದಂತೆ ಪರಿಹಾರವನ್ನು ವಿತರಿಸಿದ ನಿದರ್ಶನ ನಮ್ಮ ಮುಂದೆ ಇಲ್ಲ. ನಮ್ಮ ಸರ್ಕಾರ ಈ ಕಾರ್ಯ ಮಾಡಿದೆ.
- ಜೊತೆಗೆ ಪ್ರವಾಹದ ಸಂದರ್ಭದಲ್ಲಿ ಇಷ್ಟು ಅಲ್ಪಾವಧಿಯಲ್ಲಿ, ಇಷ್ಟು ದೊಡ್ಡ ಸಂಖ್ಯೆಯ ಸಂತ್ರಸ್ತರಿಗೆ ಹಾನಿ ಬಗ್ಗೆ ಶೀಘ್ರ ಸಮೀಕ್ಷೆ ಕೈಗೊಂಡು ಅಷ್ಟೇ ವೇಗವಾಗಿ ಪರಿಹಾರ ವಿತರಿಸಿರುವುದೂ ಕೂಡಾ ರಾಜ್ಯದಲ್ಲಿ ಇದೇ ಮೊದಲು.




**ಒಟ್ಟಾರೆ ಹಾನಿ, ಪರಿಹಾರಕ್ಕೆ ಬಿಡುಗಡೆಯಾದ ಹಣಕಾಸು ವಿವರಗಳು**

| | | ಕೋಟಿ ರೂ.ಗಳಲ್ಲಿ |
|---|---|---|
| 1 | ಪರಿಹಾರ ಕಾರ್ಯಗಳಿಗೆ ರಾಜ್ಯ ಸರ್ಕಾರದಿಂದ ಈವರೆಗೆ ಬಿಡುಗಡೆಯಾದ ಒಟ್ಟು ಹಣ | 2033.25 |
| 2 | ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಹಣ | 1698.88 |
| 3 | ಪರಿಹಾರ ಸಂಗ್ರಹವಾದ ಮೊತ್ತ | 426.73 |
| 4 | ಈವರೆಗೆ ವೆಚ್ಚವಾದ ಹಣ (14 ಜಿಲ್ಲೆಗಳಿಗೆ) | 1787.00 |
| 5 | ಪ್ರವಾಹದಿಂದ ಆದ ಹಾನಿ ಮೊತ್ತ | 18568.29 |
| 6 | ಎನ್‌ಸಿಸಿಎಫ್‌ನಡಿ ಕೇಂದ್ರ ಸರ್ಕಾರದಿಂದ ಕೋರಲಾಗಿರುವ ನೆರವು | 7,047 |

## ದೇಣಿಗೆಯ ಮಹಾಪೂರ

- ನೆರೆ ಹಾವಳಿಗೆ ತುತ್ತಾದ ಸಂತ್ರಸ್ತರ ನೆರವಿಗೆ ರಾಜ್ಯದ ಜನತೆ, ಸಂಘ ಸಂಸ್ಥೆಗಳು, ಉದ್ಯಮಿಗಳು ಮತ್ತು ಗಣ್ಯ ವ್ಯಕ್ತಿಗಳು ಉದಾರವಾಗಿ ದೇಣಿಗೆ ನೀಡಿದ್ದಾರೆ.



**ನೆರೆ ಹಾವಳಿಗೆ ತುತ್ತಾಗಿ ಸಂತ್ರಸ್ತರಾದ ಜನರ ಪುನರ್ವಸತಿಗಾಗಿ ನೆರವು ನೀಡಲು ವಿವಿಧ ಸಂಘ ಸಂಸ್ಥೆಗಳು, ಕೈಗಾರಿಕೋದ್ಯಮಿಗಳು ಹಾಗೂ ಇತರೆ ಗಣ್ಯ ವ್ಯಕ್ತಿಗಳು ನೀಡಿರುವ ಆಶ್ವಾಸನೆ**

| ಕ್ರ ಸಂ. | ಸಂಸ್ಥೆಗಳು | ಒಟ್ಟು ಹಣ (ಕೋಟಿ. ರೂ.ಗಳಲ್ಲಿ) |
|---|---|---|
| 1 | ಸರ್ಕಾರಿ ಸಂಸ್ಥೆಗಳು | 205.00 |
| 2 | ಸರ್ಕಾರಿ ಹಾಗೂ ನಿಗಮ ಮಂಡಳಿಗಳ ನೌಕರರ ವೇತನ | 264.26 |
| 3 | ವಿವಿಧ ಸಂಘ-ಸಂಸ್ಥೆಗಳು ಕೈಗಾರಿಕೋದ್ಯಮಿಗಳು ಹಾಗೂ ಇತರೆ ಗಣ್ಯ ವ್ಯಕ್ತಿಗಳು | 782.90 |
| | ಒಟ್ಟು | **1252.16** |

**ವಿವಿಧ ಸಂಘ ಸಂಸ್ಥೆಗಳು, ಕೈಗಾರಿಕೋದ್ಯಮಿಗಳು ಹಾಗೂ ಇತರೆ ಗಣ್ಯ ವ್ಯಕ್ತಿಗಳು ನೀಡಿರುವ ದೇಣಿಗೆ (28.06.2010ರವರೆಗೆ)**

| ಕ್ರ ಸಂ. | ಸಂಸ್ಥೆಗಳು | ಒಟ್ಟು ಹಣ (ಕೋಟಿ. ರೂ.ಗಳಲ್ಲಿ) |
|---|---|---|
| 1 | ಸರ್ಕಾರಿ ಸಂಸ್ಥೆಗಳು (ನಿಗಮ/ಮಂಡಳಿಗಳು) | 234.12 |
| 2 | ಸರ್ಕಾರಿ ಹಾಗೂ ನಿಗಮ, ಮಂಡಳಿಗಳ ನೌಕರರ ವೇತನ ಹಾಗೂ ತುಟ್ಟಿ ಭತ್ಯೆ ಬಾಕಿ | 3.00 |
| 3 | ವಿವಿಧ ಸಂಘ-ಸಂಸ್ಥೆಗಳು, ಕೈಗಾರಿಕೋದ್ಯಮಿಗಳು ಹಾಗೂ ಇತರೆ ಗಣ್ಯ ವ್ಯಕ್ತಿಗಳು | 55.66 |
| 4 | ಮಾನ್ಯ ಮುಖ್ಯಮಂತ್ರಿಯವರ ಕಚೇರಿಯಲ್ಲಿ ಸ್ವೀಕರಿಸಿರುವ ಮೊತ್ತ | 64.86 |
| 5 | ಬೆಂಗಳೂರು ಒನ್‌ನಲ್ಲಿ ಸಾರ್ವಜನಿಕರಿಂದ ಸಂಗ್ರಹಿಸಿದ ಮೊತ್ತ | **2.53** |
| 6 | ರಾಜ್ಯದ ಇತರೆ ಜಿಲ್ಲೆಗಳಿಂದ ಪ್ರಕೃತಿ ವಿಕೋಪ ಪರಿಹಾರ ನಿಧಿ ಖಾತೆಗೆ ಜಮಾವಾದ ಒಟ್ಟು ಮೊತ್ತ | 10.08 |
| 7 | ಸರ್ಕಾರಿ ನೌಕರರ 4 ತಿಂಗಳ ತುಟ್ಟಿ ಭತ್ಯೆ ಬಾಕಿ (ಆರ್ಥಿಕ ಇಲಾಖೆಯ ಖಜಾನೆಯಲ್ಲಿರುತ್ತದೆ) | 35.16 |
| 8 | ಸುನಾಮಿ ಪರಿಹಾರ ನಿಧಿಯಿಂದ ವರ್ಗಾವಣೆಗೊಳ್ಳಬೇಕಾದ ಮೊತ್ತ | 21.32 |
| | ಒಟ್ಟು | **426.73** |

- ಪಾದಯಾತ್ರೆ ಮೂಲಕ ಮಾನ್ಯ ಮುಖ್ಯಮಂತ್ರಿಯವರು ತಮ್ಮ ಸಚಿವ ಸಂಪುಟದ ಸದಸ್ಯರೊಂದಿಗೆ ಬೆಂಗಳೂರು ನಗರದಲ್ಲಿ ಕೈಗೊಂಡ ಪಾದಯಾತ್ರೆ ಸಂದರ್ಭದಲ್ಲಿ ನಾಗರೀಕರು ಸ್ಪಂದಿಸಿದ ರೀತಿ ಅನನ್ಯ. ಕನ್ನಡಿಗರ ಉದಾರ ಮನಸ್ಸು ಮತ್ತು ಹೃದಯವಂತಿಕೆಗೆ ಇದು ಸಾಕ್ಷಿಯಾಗಿತ್ತು.
- ನಮ್ಮ ಸರ್ಕಾರ ನೆರೆ ಪರಿಸ್ಥಿತಿ ನಿರ್ವಹಿಸಿದ ಬಗ್ಗೆ ಮತ್ತು ಪರಿಹಾರ ನಿಧಿಗೆ ಸಂಪನ್ಮೂಲ ಸಂಗ್ರಹಿಸಲು ನಡೆಸಿದ



ರಾಮದುರ್ಗ ತಾಲ್ಲೂಕಿನ ರಂಕಲಕೊಪ್ಪ ಗ್ರಾಮ
ದಾನಿಗಳು : ಆರ್ ಎನ್ ಶೆಟ್ಟಿ

ಪ್ರಯತ್ನಗಳ ಬಗ್ಗೆ ಗಣ್ಯರೂ ಸೇರಿ ಸಾರ್ವಜನಿಕರಿಂದ ವ್ಯಾಪಕವಾದ ಮೆಚ್ಚುಗೆ ಉಂಟಾಗಿದೆ.

- ಪ್ರಧಾನ ಮಂತ್ರಿ ಡಾ॥ ಮನಮೋಹನ್‌ಸಿಂಗ್, ಕೇಂದ್ರ ಗೃಹ ಸಚಿವ ಶ್ರೀ ಪಿ. ಚಿದಂಬರಂ, ಕಾನೂನು ಸಚಿವ ಶ್ರೀ ಎಂ. ವೀರಪ್ಪ ಮೊಯಿಲಿ ಕೂಡಾ ಪ್ರಶಂಸಿಸಿದ್ದಾರೆ.
- ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ಸಹ ಪಾದಯಾತ್ರೆ ಮೂಲಕ ಸಾರ್ವಜನಿಕರಿಂದ ವಂತಿಗೆ ಸಂಗ್ರಹಿಸಲು ಮಾಡಿದ ಪ್ರಯತ್ನವನ್ನು ಪತ್ರ ಮುಖೇನ ಮೆಚ್ಚಿಕೊಂಡಿದ್ದಾರೆ.
- ಹಿರಿಯ ಚಿಂತಕ, ಪತ್ರಿಕೋದ್ಯಮಿ ಮತ್ತು ಸಾಹಿತಿ ನಾಡೋಜ ಡಾ॥ ಪಾಟೀಲ್ ಪುಟ್ಟಪ್ಪನವರು ನನಗೆ ದೀರ್ಘ ಪತ್ರ ಬರೆದು ನೆರೆ ಪರಿಸ್ಥಿತಿ ನಿರ್ವಹಣೆ, ಸಂತ್ರಸ್ತರಿಗೆ ನೆರವು ಹಾಗೂ ಪರಿಹಾರ ಒದಗಿಸಲು ಕೈಗೊಂಡ ಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿರುತ್ತಾರೆ.

**ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕ್ರಮಗಳು:**

- ಅತಿವೃಷ್ಟಿ ಮತ್ತು ಪ್ರವಾಹಪೀಡಿತ ಪ್ರದೇಶಗಳಲ್ಲಿ ಪುನರ್ವಸತಿ ಮತ್ತು ಪುನರ್ ನಿರ್ಮಾಣದ ಕ್ರಮಗಳನ್ನು ಅತ್ಯಂತ ತ್ವರಿತವಾಗಿ ರಾಜ್ಯ ಸರ್ಕಾರ ಕೈಗೊಂಡಿದೆ.
- ದೇಶದಲ್ಲಿ ಮತ್ತು ಇತರೆ ದೇಶಗಳಲ್ಲಿ ನೈಸರ್ಗಿಕ ವಿಪತ್ತು ಉಂಟಾದಾಗ ಕೈಗೊಂಡ ಪುನರ್ವಸತಿ ಯೋಜನೆಗಳಿಗೆ ಹೋಲಿಸಿದಾಗ ಈ ಪುನರ್ವಸತಿ ಕಾರ್ಯಾರಂಭ 12 ಪಟ್ಟು ತ್ವರಿತವಾಗಿರುತ್ತದೆ. ಇದೊಂದು ಪುನರ್ವಸತಿ ಕಾರ್ಯಾರಂಭದಲ್ಲಿ ದಾಖಲೆ ಆಗಿರುತ್ತದೆ.
- ಪುನರ್ವಸತಿಯ ಯೋಜನೆಯು ಪೂರ್ಣಗೊಳ್ಳಲು ಇತರೆಡೆ ಸರಾಸರಿ ನಾಲ್ಕರಿಂದ ಐದು ವರ್ಷ ತೆಗೆದುಕೊಂಡಿದ್ದು, ಅದನ್ನು ಸಹ ತ್ವರಿತವಾಗಿ ಮತ್ತು ದಾಖಲೆ ಅಲ್ಪ ಸಮಯದಲ್ಲಿ ಸಂಪೂರ್ಣವಾಗಿ ಮುಗಿಸಲು ಯೋಜಿಸಿದೆ.
- ನಮ್ಮ ಸರ್ಕಾರ ಅತ್ಯಂತ ತ್ವರಿತವಾಗಿ ಮತ್ತು ಕಾಲಮಿತಿಗೆ ಒಳಪಟ್ಟು ಗ್ರಾಮಗಳ ಸ್ಥಳಾಂತರ ಮತ್ತು ಪುನರ್ ನಿರ್ಮಾಣದ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.
- ಪ್ರವಾಹಪೀಡಿತ ಗ್ರಾಮಗಳ ಸ್ಥಳಾಂತರ ಮತ್ತು ಮನೆಗಳ ನಿರ್ಮಾಣಕ್ಕೆ ಸರ್ಕಾರ "ಆಸರೆ" ಎಂಬ ಯೋಜನೆ ರೂಪಿಸಿ ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ



ಎನ್.ಮಲ್ಲಾಪುರ ರಾಯಚೂರು ಜಿಲ್ಲೆ
ದಾನಿಗಳು : ಐಸ್ಕೊ



ಕೊಂಗವಾಡ, ಧಾರವಾಡ ಜಿಲ್ಲೆ
ದಾನಿಗಳು : ಶ್ರೀ ಕ್ಷೇತ್ರ ಧರ್ಮಸ್ಥಳ

ಅನುಷ್ಠಾನ ಮಾಡುತ್ತಿದೆ. 19.10.2009ರಂದು ಅಂದರೆ ಪ್ರವಾಹ ಸಂಭವಿಸಿದ 15 ದಿನಗಳಲ್ಲಿ ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕಿನ ಕೊಂಗವಾಡ ಗ್ರಾಮವನ್ನು ಈ ಯೋಜನೆಯಡಿ ಪ್ರಥಮವಾಗಿ ಆಯ್ಕೆ ಮಾಡಿ ವಸತಿ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ.

- ನೆರೆ ಪೀಡಿತ ಜಿಲ್ಲೆಗಳಲ್ಲಿ ಒಟ್ಟು 301 ಗ್ರಾಮಗಳ ಪೈಕಿ 149 ಗ್ರಾಮಗಳು ಪೂರ್ಣವಾಗಿ ಹಾಗೂ 152 ಗ್ರಾಮಗಳನ್ನು ಭಾಗಶಃ ಸ್ಥಳಾಂತರಿಸಬೇಕಾಗಿರುತ್ತದೆ. ಒಟ್ಟು 62685 ಮನೆಗಳಿಗೆ ಬೇಕಾದ ಜಮೀನು 5552 ಎಕರೆ ಆಗಿದ್ದು, ಇದರಲ್ಲಿ 654 ಸರ್ಕಾರಿ ಜಮೀನಾಗಿದ್ದು, 4435 ಎಕರೆ ಜಮೀನನ್ನು ಖರೀದಿಸುವುದರೊಂದಿಗೆ ಒಟ್ಟಾರೆ 5089 ಎಕರೆ ಜಮೀನನ್ನು ಮನೆ ನಿರ್ಮಾಣ ಕಾರ್ಯಗಳಿಗೆ ಲಭ್ಯಗೊಳಿಸಲಾಗಿದೆ. ಇನ್ನುಳಿದ ಸುಮಾರು 463 ಎಕರೆ ಜಮೀನಿನ ಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದೆ.
- ಈಗಾಗಲೇ 280 ಗ್ರಾಮಗಳಲ್ಲಿ ಭೂಸ್ವಾಧೀನ ಕಾರ್ಯ ಪೂರ್ಣವಾಗಿದೆ. 21 ಗ್ರಾಮಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆ ಜಾರಿಯಲ್ಲಿದೆ. 269 ಗ್ರಾಮಗಳಲ್ಲಿ ನೂತನ ಬಡಾವಣೆಗಳನ್ನು ರೂಪಿಸಲಾಗಿದೆ. 201 ಗ್ರಾಮಗಳಲ್ಲಿ ಆಸರೆ ಯೋಜನೆಯಡಿ ಮನೆ ಕಟ್ಟುವ ಕೆಲಸಕ್ಕೆ ಚಾಲನೆ ನೀಡಲಾಗಿದೆ.
- ಪುನರ್ವಸತಿ ಕೆಲಸಗಳಲ್ಲಿ ಸರ್ಕಾರದ ಪ್ರಾಮಾಣಿಕತೆ ಮತ್ತು ಬದ್ಧತೆಯನ್ನು ಗುರುತಿಸಿ ಅನೇಕ ಗ್ರಾಮಗಳಲ್ಲಿ ರೈತರು ತಮ್ಮ ಜಮೀನುಗಳನ್ನು ಕೊಡಲು ಸ್ವಯಂ ಮುಂದೆ ಬಂದಿದ್ದಾರೆ. ಭೂಸ್ವಾಧೀನ ಪ್ರಕ್ರಿಯೆಗೆ ಸರ್ಕಾರದೊಡನೆ ರೈತರೇ ಸ್ವಯಂಸ್ಫೂರ್ತಿಯಿಂದ ಸಹಕರಿಸುತ್ತಿರುವ ಅಪರೂಪದ ಮತ್ತು ಅಭೂತಪೂರ್ವ ಉದಾಹರಣೆ ಇದಾಗಿದೆ.
- ಸ್ಥಳಾಂತರಿಸುವ ಗ್ರಾಮಗಳಲ್ಲಿ 30' x 50' ಅಳತೆಯ ನಿವೇಶನಗಳಲ್ಲಿ ಪ್ರತಿ ಮನೆಯನ್ನು 1.35 ಲಕ್ಷ ರೂ. ವೆಚ್ಚದಲ್ಲಿ ಉಚಿತವಾಗಿ ನಿರ್ಮಿಸಿಕೊಡಲಾಗುವುದು. ಅಲ್ಲದೆ ಶಾಲೆ, ಸಮುದಾಯ ಭವನ, ರಸ್ತೆ, ಸೇತುವೆ, ಕುಡಿಯುವ ನೀರು, ಒಳಚರಂಡಿ ಮತ್ತು ವಿದ್ಯುತ್ ಸರಬರಾಜು ಮೊದಲಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಸ್ಥಳಾಂತರಕ್ಕೆ ಬೇಕಾದ ಜಮೀನನ್ನು ಸರ್ಕಾರದ ವತಿಯಿಂದ ಕೊಡಲಾಗುತ್ತಿದೆ.



ಶಿರಬಡಗಿ, ಬಾಗಲಕೋಟೆ ಜಿಲ್ಲೆ
ದಾನಿಗಳು : ಆರ್.ಎ.ಫೌಂಡೇಶನ್




- ಪುನರ್ವಸತಿ ಮತ್ತು ಪರಿಹಾರ ಕಾರ್ಯಗಳ ನಿರ್ವಹಣೆಗಾಗಿ ಮೊದಲ ಬಾರಿಗೆ ರಾಜ್ಯ ಮಟ್ಟದಲ್ಲಿ ನೋಡಲ್ ಅಧಿಕಾರಿ ಮತ್ತು 86 ತಾಲ್ಲೂಕು ಮಟ್ಟದ ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿದೆ.
- ಗ್ರಾಮಗಳ ಸ್ಥಳಾಂತರಕ್ಕೆ ಭೂಮಿ ಖರೀದಿಸಲು ಸರ್ಕಾರ ಮಾರ್ಗಸೂಚಿಗಳನ್ನು ನೀಡುವ ಜೊತೆಗೆ ಭೂ ಖರೀದಿಗೆ 155 ಕೋಟಿ ರೂ. ಹಣ ಬಿಡುಗಡೆ ಮಾಡಿದೆ.
- ಮನೆಗಳ ಪುನರ್ ನಿರ್ಮಾಣಕ್ಕೆ ಶೇ.4ರ ಬಡ್ಡಿ ದರದಲ್ಲಿ ಬ್ಯಾಂಕ್ ಸಾಲ ದೊರಕಿಸಿಕೊಡುವ ಏರ್ಪಾಡನ್ನು ಮಾಡಲಾಗಿದೆ.
- ನೆರೆಪೀಡಿತ ಕುಟುಂಬಗಳಿಗೆ ಶಾಶ್ವತ ಪುನರ್ವಸತಿಗಾಗಿ "ಆಸರೆ" ಎಂಬ ಖಾಸಗಿ–ಸರ್ಕಾರಿ ಸಹಭಾಗಿತ್ವದಲ್ಲಿ ಹೊಸ ವಸತಿ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಇದಕ್ಕಾಗಿ ಒಳ್ಳೆಯ ಪ್ರತಿಕ್ರಿಯೆ ದೊರಕಿದೆ. ರೈತರೂ ಕೂಡ ಸ್ವಯಂ ಪ್ರೇರಿತರಾಗಿ ಪುನರ್ವಸತಿ ಕಾರ್ಯಕ್ರಮಕ್ಕಾಗಿ ತಮ್ಮ ಜಮೀನುಗಳನ್ನು ನೀಡಲು ಮುಂದೆ ಬಂದಿದ್ದಾರೆ
- "ಆಸರೆ" ಕಾರ್ಯಕ್ರಮದ ಅನುಷ್ಠಾನಕ್ಕೋಸ್ಕರ ಭೂಮಿ ಪೂಜೆಯನ್ನು ಈಗಾಗಲೇ ಪೂರೈಸಲಾಗಿದೆ. ಈ ಸಮಾರಂಭಗಳಲ್ಲಿ ವಿವಿಧ ಮಠಾಧೀಶರು, ದಾನಿಗಳು ಹಾಗೂ ಇತರೆ ಗಣ್ಯ ವ್ಯಕ್ತಿಗಳು ಭಾಗವಹಿಸಿರುತ್ತಾರೆ. ಮಾನ್ಯ ಕೇಂದ್ರ ಸಚಿವರುಗಳಾದ ಶ್ರೀ ಪಿ. ಚಿದಂಬರಂ ಹಾಗೂ ಶ್ರೀ ವೀರಪ್ಪ ಮೊಯ್ಲಿ ರವರು ಸಹ ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ರಾಜ್ಯ ಸರ್ಕಾರವು ನೆರೆಪೀಡಿತರಿಗೆ ನೀಡುತ್ತಿರುವ ನೆರವು ಹಾಗೂ ಇತರೆ ಪುನರ್ವಸತಿ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿರುತ್ತಾರೆ.
- ಬಹುತೇಕ ಹಳ್ಳಿಗಳಲ್ಲಿ ಮೂಲಭೂತ ಸೌಕರ್ಯಗಳಾದ ರಸ್ತೆಗಳ ಅಭಿವೃದ್ಧಿ, ಕುಡಿಯುವ ನೀರು ಸರಬರಾಜು, ವಿದ್ಯುತ್ ಸರಬರಾಜು, ಶಾಲೆಗಳು ಮತ್ತು ಅಂಗನವಾಡಿ ಕೇಂದ್ರ ಹಾಗೂ ಸಮುದಾಯ ಭವನಗಳನ್ನು ಸರ್ಕಾರವು ಕಲ್ಪಿಸುತ್ತಿದ್ದು, ದಾನಿಗಳು ಮನೆ ನಿರ್ಮಾಣ ಮಾಡಲು ಸರ್ಕಾರದ ಜೊತೆ ಕೈಜೋಡಿಸಿದ್ದಾರೆ.
- ದಾನಿಗಳು ಕಟ್ಟಿಸುವ ಮನೆಗಳಿಗೆ ಬೇಕಾದ ಸಾಮಗ್ರಿಗಳನ್ನು ಕೊಳ್ಳಲು ಸರ್ಕಾರದ ವತಿಯಿಂದ ವ್ಯಾಟ್ ತೆರಿಗೆ ವಿನಾಯಿತಿ ನೀಡಲಾಗಿದೆ. ಅಲ್ಲದೆ ಮನೆಗಳ ನಿರ್ಮಾಣಕ್ಕಾಗಿ ಬೇಕಾಗುವ ನೀರು ಸರಬರಾಜಿಗೆ ವಿದ್ಯುಚ್ಛಕ್ತಿ ಕೊರತೆ ಇರುವ ಕಡೆ ಡೀಸೆಲ್ ಜನರೇಟರ್‌ಗಳನ್ನು ಬಾಡಿಗೆ ಆಧಾರದ ಮೇಲೆ



ರಾಯಚೂರು ಜಿಲ್ಲೆಯ ಡೊಂಗರಾಂಪೂರ ಗ್ರಾಮದಲ್ಲಿ ಮಾತಾ ಅಮೃತಾನಂದಮಯಿರವರಿಂದ ನಿರ್ಮಿತವಾಗಿರುವ ಪುನರ್ವಸತಿ ಕೇಂದ್ರಗಳು

ಉಪಯೋಗಿಸಿಕೊಳ್ಳಲು ಮಂಜೂರಾತಿ ನೀಡಲಾಗಿದೆ.

- ಪರಿಹಾರ ಮತ್ತು ಪುನರ್ವಸತಿಗಾಗಿ ರಾಷ್ಟ್ರ ಮತ್ತು ಹೊರ ರಾಷ್ಟ್ರಗಳಿಂದ ಸಾಕಷ್ಟು ಸಂಖ್ಯೆಯಲ್ಲಿ ಸಂಘ–ಸಂಸ್ಥೆಗಳು ಮುಂದೆ ಬಂದಿರುತ್ತವೆ. ರಾಷ್ಟ್ರದ ಪ್ರತಿಷ್ಠಿತ ಸಂಸ್ಥೆಗಳಾದ ಇನ್‌ಫೋಸಿಸ್, ವಿಪ್ರೋ, ಬಯೋಕಾನ್, ಜಿಂದಾಲ್, ಕಲ್ಯಾಣಿ, ರಾಜೀವ್ ಚಂದ್ರಶೇಖರ್ ಫೌಂಡೇಷನ್, ರೇಣುಕಾ ಷುಗರ್ಸ್, ಸೇವಾ ಭಾರತಿ, ಆದಿಚುಂಚನಗಿರಿ ಮಠ, ಪೇಜಾವರ ಮಠ, ಶ್ರೀಕ್ಷೇತ್ರ ಧರ್ಮಸ್ಥಳ, ರಾಮಕೃಷ್ಣ ಆಶ್ರಮ, ಮಾತಾ ಅಮೃತಾನಂದಮಯಿ ಟ್ರಸ್ಟ್, ಕ್ರೆಡೈ, ಆರ್.ಎನ್.ಶೆಟ್ಟಿ ಸಮೂಹಗಳು, ಮೈಸೂರಿನ ಸಿಟಿಜೆನ್ಸ್ ಫೋರಂ (ಜೆ.ಎಸ್.ಎಸ್), ಸಿಸ್ಕೋ, ಟಿವಿ–9, ಬಳ್ಳಾರಿ ಗಣಿ ಸಂಸ್ಥೆಗಳು., ಭರೂಕ ಪವರ್ ಕಾರ್ಪೋರೇಷನ್, ಹೋಪ್ ಫೌಂಡೇಷನ್, ಆರ್ಟ್ ಆಫ್ ಲೀವಿಂಗ್, ಹಟ್ಟಿ ಗೋಲ್ಡ್ ಮೈನ್ಸ್, ಕಮ್ಮವಾರಿ ಸಂಘ, ಇತ್ಯಾದಿ ಸಂಸ್ಥೆಗಳು ಪುನರ್ವಸತಿ ಕಾರ್ಯಕ್ರಮದಲ್ಲಿ ಸರ್ಕಾರದೊಡನೆ ಕೈಜೋಡಿಸಲು ಮುಂದೆ ಬಂದಿವೆ. ವಿದೇಶಿ ಸಂಸ್ಥೆಯಾದ ಗೋವಿಂದ್ ಪ್ರಸಾದ್ ಹ್ಯೂಮ್ಯಾನಿಟೇರಿಯನ್ ಫೌಂಡೇಷನ್, ಅಮೆರಿಕ ಇವರು ಸಹ ಪುನರ್ವಸತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಮುಂದೆ ಬಂದಿದ್ದು, ಸುಮಾರು 5000 ಮನೆಗಳನ್ನು ಕಟ್ಟಿಸಿಕೊಡಲು ಒಪ್ಪಿರುತ್ತಾರೆ.
- 201 ಗ್ರಾಮಗಳಲ್ಲಿ ಕಟ್ಟಡ ಕೆಲಸ ಪ್ರಾರಂಭವಾಗಿದ್ದು, ಈಗಾಗಲೇ 269 ಗ್ರಾಮಗಳಲ್ಲಿ ಮೂಲಭೂತ ಸೌಕರ್ಯಗಳೊಡನೆ ಬಡಾವಣೆ ನಿರ್ಮಾಣ ಪೂರ್ಣಗೊಂಡಿರುತ್ತದೆ ಹಾಗೂ 21762 ಮನೆಗಳ ನಿರ್ಮಾಣ ಕಾರ್ಯ ಪ್ರಾರಂಭವಾಗಿದೆ. ಇದರಲ್ಲಿ 997 ಮನೆಗಳನ್ನು ಪೂರ್ಣಗೊಳಿಸಲಾಗಿದೆ.
- ಸರ್ಕಾರದ ನಿರ್ಮಾಣ ಸಂಸ್ಥೆಗಳಾದ ಕರ್ನಾಟಕ ಗೃಹ ಮಂಡಳಿ, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ಹಾಗೂ ಕರ್ನಾಟಕ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ ಇವುಗಳ ವತಿಯಿಂದ 20 ಸಾವಿರಕ್ಕೂ ಅಧಿಕ ಮನೆಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ.

**ಪರಿಹಾರ ಮತ್ತು ಪುನರ್ವಸತಿ ಕಾರ್ಯಕ್ರಮಗಳ ಉಸ್ತುವಾರಿ**

- ಪರಿಹಾರ ಕಾರ್ಯಾಚರಣೆಯನ್ನು ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ವ್ಯವಸ್ಥಿತವಾಗಿ ಮತ್ತು ಸತತ ಪರಿಶೀಲನೆ ಹಾಗೂ ಉಸ್ತುವಾರಿ ಮಾಡಲು ಮೊದಲ ಬಾರಿಗೆ ಕ್ರಮ ಕೈಗೊಳ್ಳಲಾಗಿದೆ.
- ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ತಮಗೆ ಸಂಬಂಧಿಸಿದ ಜಿಲ್ಲೆಗಳಲ್ಲಿ ನಿಯಮಿತವಾಗಿ ಪ್ರವಾಸ ಕೈಗೊಂಡು ಪರಿಶೀಲನೆ ನಡೆಸುತ್ತಿದ್ದಾರೆ.
- ಇದರ ಜೊತೆಗೆ ತಾಲ್ಲೂಕು ಮಟ್ಟದಲ್ಲಿ 84 ತಾಲ್ಲೂಕುಗಳಲ್ಲಿ ನೋಡೆಲ್ ಅಧಿಕಾರಿಗಳನ್ನು ನೇಮಿಸಿದ್ದು ಹಾನಿಯ ಅಂದಾಜು ಮತ್ತು ಪರಿಹಾರದ ವೆಚ್ಚ ಪರಿಶೀಲಿಸುತ್ತಾರೆ.
- ಪರಿಹಾರ ನೀಡಿಕೆಯಲ್ಲಿ ಲೋಪದೋಷ ಮತ್ತು ದುರುಪಯೋಗ ಆಗದಂತೆ ಸರ್ಕಾರ ಎಚ್ಚರ ವಹಿಸಿದ್ದು ಒಂದು ವೇಳೆ ಅಂತಹ ಪ್ರಕರಣಗಳು ಸಂಭವಿಸಿದ್ದೇ ಆದರೆ ಕಠಿಣ ಶಿಕ್ಷೆಗೆ ಒಳಪಡಿಸುವ ಎಚ್ಚರಿಕೆ ನೀಡಲಾಗಿದೆ.
- ಮನೆಗಳ ನಿರ್ಮಾಣವನ್ನು ಪೂರ್ಣಗೊಳಿಸಲು ದಿನಾಂಕ 09–06–2010ರಂದು ಸಭೆ ನಡೆಸಿ 14 ಜಿಲ್ಲೆಗಳಲ್ಲಿ ಹೆಚ್ಚುವರಿಯಾಗಿ ನೋಡಲ್ ಅಧಿಕಾರಿಗಳನ್ನು ನೇಮಿಸಿ ಆದಷ್ಟು ಬೇಗ ಪೂರ್ಣಗೊಳಿಸಲು ಹಾಗೂ ಈ ವಿಚಾರದಲ್ಲಿ ಯಾವುದೇ ಕೊರತೆ ಮತ್ತು ಲೋಪದೋಷಕ್ಕೆ ಅವಕಾಶ ನೀಡದೆ ಈ ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಗುವುದು.


ಬಟೇಗೇರಾ, ಗುಲ್ಬರ್ಗಾ ಜಿಲ್ಲೆ
ದಾನಿಗಳು : ಇನ್ಫೋಸಿಸ್


ಟಿ.ಎಸ್. ಕಡ್ಲೂರು, ಬಳ್ಳಾರಿ ಜಿಲ್ಲೆ
ದಾನಿಗಳು : ಬಿ.ಎಂ.ಎಂ. ಕಂಪನಿ


ಹರಪ್ಪನಹಳ್ಳಿ, ದಾವಣಗೆರೆ ಜಿಲ್ಲೆ
ದಾನಿಗಳು : ಗೋವಿಂದ ಪ್ರಸಾದ್ ಫೌಂಡೇಶನ್


ಉಮಳಿ ಪನ್ನೂರ, ರಾಯಚೂರು ಜಿಲ್ಲೆ
ದಾನಿಗಳು : ಶ್ರೀ ಸಿದ್ಧಗಂಗಾ ಮಠ



ಮಾಟೂರು, ಬಳ್ಳಾರಿ ಜಿಲ್ಲೆ
ದಾನಿಗಳು : ಬಿ.ಎಂ.ಎಂ.ಗ್ರೂಪ್



ಹಿರೇಸಿಂಧೋಗಿ, ಕೊಪ್ಪಳ ಜಿಲ್ಲೆ
ದಾನಿಗಳು : ಕಲ್ಯಾಣ ಚಾರಿಟೇಬಲ್ ಟ್ರಸ್ಟ್



ಕೂಡಿ, ಗುಲ್ಬರ್ಗಾ ಜಿಲ್ಲೆ
ದಾನಿಗಳು : ಪೇಜಾವರ ಮಠ



ಮಾಳವಾಡ, ಗದಗ ಜಿಲ್ಲೆ
ದಾನಿಗಳು : ಜೆ.ಎಸ್.ಡಬ್ಲ್ಯೂ



ಬಟ್ಟೆಗೇರಾ ಕೆ. – ಗುಲ್ಬರ್ಗಾ ಜಿಲ್ಲೆ
ದಾನಿಗಳು : ಇನ್ಫೋಸಿಸ್

| | ಕಟ್ಟಬೇಕಾದ ಮನೆಗಳ ಸಂಖ್ಯೆ | ಕಟ್ಟಡ ಪ್ರಾರಂಭಿಸಿರುವ ಮನೆಗಳ ಸಂಖ್ಯೆ |
|---|---|---|
| ಕರ್ನಾಟಕ ಗೃಹ ಮಂಡಳಿ + ಆರ್‌ಜಿಆರ್‌ಹೆಚ್‌ಸಿ | 12623 | 4307 |
| ಕೆಆರ್‌ಐಡಿಸಿಎಲ್ | 11209 | 2821 |
| ದಾನಿಗಳು | 39078 | 14634 |
| ಒಟ್ಟು | 62910 | 21762 |

### ಭೂಸ್ವಾಧೀನ ಪ್ರಕ್ರಿಯೆ ನಡೆಯುತ್ತಿರುವ ಗ್ರಾಮಗಳ ಸಂಖ್ಯೆ 21

1) ಬಾಗಲಕೋಟೆ – 1) ಪಟ್ಟದ ಕಲ್ಲು 2) ತೆರೆದಾಳು 3) ಜಕ್ಕನೂರು, 4) ನಂದಗಾವ್

2) ಬೆಳಗಾವಿ – 1) ಉಗಾರ್ ಬಿ 2) ಉಗಾರ್ ಕೆ 3) ಕಲ್ಲೋಳ

3) ವಿಜಾಪುರ – 1) ಚಿಕ್ಕರಸಂಗಿ 2) ನಂದಗೇರಿ 3) ತೆಗ್ಗೆಹಳ್ಳಿ

4) ಧಾರವಾಡ – 1) ಅಯಾಟ್ಟಿ

5) ರಾಯಚೂರು – 1) ಅತಗೂರು 2) ಒಡಲೂರು 3) ಹೆದಸನಹಳ್ಳಿ 4) ಚಿಕ್ಕಸುಗೂರು 5) ಮಾರಕ್ಕಲದಿನ್ನಿ 6) ಹೆಚ್.ಸಿದ್ದಾಪುರ 7) ಗಾಂಧಿನಗರ (ಮಸ್ಕಿ)

6) ದಾವಣಗೆರೆ – 1) ದಿಟ್ಟೂರು 2) ಗೋವಿನಹಾಳ್ 3) ಹಲಸಬಾಳು.

### ಗ್ರಾಮಗಳ ಸ್ಥಳಾಂತರಕ್ಕೆ ವಿವಿಧ ಇಲಾಖೆಗಳು ಮಾಡಿರುವ ವೆಚ್ಚಗಳು

1) ಜೆಸ್ಕಾಂ – 14.00 ಕೋಟಿ
2) ಹೆಸ್ಕಾಂ – 5.41 ಕೋಟಿ
3) ಬೆಸ್ಕಾಂ – 0.31 ಕೋಟಿ
4) ಎನ್.ಆರ್.ಇ.ಜಿ.ಎ. (ಆರ್‌ಡಿಪಿಆರ್) – 13.31 ಕೋಟಿ
5) ನೀರು ಸರಬರಾಜು (ಆರ್‌ಡಿಪಿಆರ್) – 24.58 ಕೋಟಿ

## ಪ್ರವಾಹಕ್ಕೊಳಗಾಗುವ ಗ್ರಾಮಗಳನ್ನು ಪೂರ್ಣ ಹಾಗೂ ಭಾಗಶಃ ಸ್ಥಳಾಂತರಿಸುವ ಪ್ರಸ್ತಾವನೆ

| ಕ್ರ. ಸಂ. | ಜಿಲ್ಲೆ | ಸ್ಥಳಾಂತರಗೊಳ್ಳುವ ಗ್ರಾಮಗಳು | | | ಸ್ಥಳಾಂತರಿಸಬೇಕಾದ (ಕುಟುಂಬ) ಒಟ್ಟು ಮನೆಗಳ ಸಂಖ್ಯೆ | ಕಟ್ಟಡ ಕೆಲಸ ಪ್ರಾರಂಭವಾಗಿರುವ ಗ್ರಾಮಗಳ ಸಂಖ್ಯೆ | ಪ್ರಾರಂಭಿಸಿರುವ ಕಟ್ಟಡಗಳ ಸಂಖ್ಯೆ | ಫೌಂಡೇಶನ್ ಹಂತ | ಲಿಂಟಲ್ ಮತ್ತು ಸಜ್ಜ ಹಂತ | ರೂಫ್ ಹಂತ | ಪೂರ್ಣಗೊಂಡ ಕಟ್ಟಡಗಳ ಸಂ |
|---|---|---|---|---|---|---|---|---|---|---|---|
| | | ಪೂರ್ಣ | ಭಾಗಶಃ | ಒಟ್ಟು | | | | | | | |
| 1 | 2 | 3ಎ | 3ಬಿ | 3ಸಿ | 3ಡಿ | 4 | 5 | 6ಎ | 6ಬಿ | 6ಸಿ | 6ಡಿ |
| 1 | ಬೆಳಗಾಂ | 4 | 22 | 26 | 3664 | 8 | 410 | 200 | 95 | 115 | 0 |
| 2 | ಬಿಜಾಪುರ | 22 | 18 | 40 | 6795 | 26 | 2198 | 2129 | 50 | 19 | 0 |
| 3 | ಧಾರವಾಡ | 4 | 3 | 7 | 1886 | 6 | 1223 | 791 | 187 | 115 | 130 |
| 4 | ಗದಗ | 13 | 1 | 14 | 6795 | 13 | 2984 | 2939 | 30 | 15 | 0 |
| 5 | ಹಾವೇರಿ | 2 | 1 | 3 | 706 | 2 | 285 | 205 | 69 | 11 | 0 |
| 6 | ಕಾರವಾರ | 0 | 1 | 1 | 50 | 1 | 50 | 35 | 15 | 0 | 0 |
| 7 | ಗುಲ್ಬರ್ಗ | 5 | 36 | 41 | 2593 | 40 | 1955 | 1498 | 249 | 170 | 28 |
| 8 | ಯಾದಗಿರಿ | 4 | 2 | 6 | 910 | 5 | 704 | 674 | 25 | 5 | 0 |
| 9 | ಬೀದರ್ | 1 | 4 | 5 | 269 | 3 | 204 | 204 | 0 | 0 | 0 |
| 10 | ರಾಯಚೂರು | 40 | 14 | 54 | 15360 | 38 | 4498 | 3561 | 386 | 235 | 326 |
| 11 | ಬಳ್ಳಾರಿ | 13 | 5 | 18 | 6558 | 16 | 2329 | 1238 | 561 | 180 | 350 |
| 12 | ಕೊಪ್ಪಳ | 10 | 7 | 17 | 2833 | 13 | 1350 | 701 | 142 | 71 | 0 |
| 13 | ಬಾಗಲಕೋಟೆ | 30 | 30 | 60 | 13108 | 28 | 3252 | 2775 | 257 | 129 | 91 |
| 14 | ದಾವಣಗೆರೆ | 1 | 8 | 9 | 1383 | 2 | 320 | 214 | 13 | 73 | 72 |
| | ಒಟ್ಟು | 149 | 152 | 301 | 62910 | 201 | 21762 | 17164 | 2079 | 1138 | 997 |

## ವಿಪತ್ತು ನಿರ್ವಹಣಾ ನಿಧಿಗಾಗಿ ಲೆಕ್ಕಶೀರ್ಷಿಕೆ 8235–00–111–02 ಸಾರ್ವಜನಿಕ ವಂತಿಗೆ ಅಡಿಯಲ್ಲಿ ಆಸರೆ ಯೋಜನೆಗಾಗಿ ಬಿಡುಗಡೆಯಾಗಿರುವ ಮೊತ್ತ

(ಕೋಟಿ ರೂ.ಗಳಲ್ಲಿ)

| | | |
|---|---|---|
| 1. | ಬೆಳಗಾವಿ | 5.00 |
| 2. | ಬಾಗಲಕೋಟೆ | 1.72 |
| 3. | ರಾಜೀವ್ ಗಾಂಧಿ ಗ್ರಾಮೀಣ ಗೃಹ ನಿರ್ಮಾಣ ನಿ., | 45.79 |
| 4. | ಕರ್ನಾಟಕ ಗೃಹ ಮಂಡಳಿ | 5.00 |
| 5. | ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ನಿ., ಬೆಂಗಳೂರು (ಕೆಆರ್‌ಐಡಿಎಲ್‌ಸಿ) | 20.00 |
| 6. | ಜಿಲ್ಲಾಧಿಕಾರಿ, ದಾವಣಗೆರೆ | 1.00 |
| 7. | ಜಿಲ್ಲಾಧಿಕಾರಿ, ಬೀದರ್ | 1.00 |
| 8. | ಜಿಲ್ಲಾಧಿಕಾರಿ, ರಾಯಚೂರು | 11.70 |
| | **ಒಟ್ಟು** | **91.21** |

## 'ಆಸರೆ' ಯೋಜನೆಯಡಿ ಸ್ಥಳಾಂತರಗೊಳ್ಳುತ್ತಿರುವ ಗ್ರಾಮಗಳ ಕಟ್ಟಡ ಕಾಮಗಾರಿಯ ವಿವಿಧ ಹಂತಗಳು

| ಕ್ರ. ಸಂ. | ಜಿಲ್ಲೆ | ತಾಲ್ಲೂಕು | ಗ್ರಾಮದ ಹೆಸರು | ದಾನಿಗಳ ಹೆಸರು | ಒಟ್ಟು ಮನೆಗಳ ಸಂಖ್ಯೆ | | | | | | ಷರಾ |
|---|---|---|---|---|---|---|---|---|---|---|---|
| | | | | | ಒಪ್ಪಂದದಂತೆ ಗ್ರಾಮದ ಸಂಖ್ಯೆ | ಪ್ರಾರಂಭವಾದ ಮನೆಗಳ ಸಂಖ್ಯೆ | ಫೌಂಡೇಶನ್ ಹಂತ | ಲಿಂಟಲ್ ಮತ್ತು ಸಜ್ಜಾ ಹಂತ | ರೂಫ್ ಹಂತ | ಪೂರ್ಣಗೊಂಡ ಮನೆಗಳು | |
| 1 | 2 | 3 | 4 | 5 | 6 | 7 | 8ಅ | 8ಆ | 8ಇ | 8ಈ | 9 |
| 1 | ಬೆಳಗಾವಿ | ರಾಮದುರ್ಗ | 1 ಚಿಕ್ಕಹಂಪಿಹೊಳಿ | ರೇಣುಕಾ ಶುಗರ್ಸ್ | 84 | 190 | 93 | 63 | 34 | 0 | |
| | | | 2 ಮಾದರಗಿ | ರೇಣುಕಾ ಶುಗರ್ಸ್ | 139 | | | | | | |
| | | | 3 ಹಲಗತ್ತಿ | ರೇಣುಕಾ ಶುಗರ್ಸ್ | 100 | 48 | 28 | 14 | 6 | 0 | |
| | | | 4 ರಂಕಲಕೊಪ್ಪ | ಆರ್.ಎನ್.ಶೆಟ್ಟಿ | 136 | 104 | 42 | 0 | 62 | 0 | |
| | | | 5 ಅವರಾದಿ | ರೇಣುಕಾ ಶುಗರ್ಸ್ | 52 | 27 | 17 | 10 | 0 | 0 | |
| | | ಚಿಕ್ಕೋಡಿ | 6 ಸೌಂದಲಗ | ಕೆಆರ್‌ಐಡಿಎಲ್ | 13 | 13 | 0 | 0 | 13 | 0 | |
| | | | 7 ಕೋಗೋನಹಳ್ಳಿ | ಕೆಆರ್‌ಐಡಿಎಲ್ | 8 | 8 | 0 | 8 | 0 | 0 | |
| | | | 8 ಭೀವಶಿ | ಡಿ.ವೈ. ಉಪ್ಪಾರ್ | 109 | 20 | 20 | 0 | 0 | 0 | |
| 2 | ಬಿಜಾಪುರ | ಬಿಜಾಪುರ | 9 ಉಕುಮನ್ಹಾಳ್ | ಸೇವಾ ಭಾರತಿ | 251 | 207 | 182 | 17 | 8 | 0 | |
| | | | 10 ಕೋಟ್ಯಾಳ | ಸಿಟಿಜೆನ್ ಫೋರಂ | 477 | 400 | 389 | 11 | 0 | 0 | |
| | | | 11 ಕೊಣ್ಣಾಳ-I | ಗೃಹ ಮಂಡಳಿ | 488 | 152 | 139 | 10 | 3 | 0 | |
| | | | 12 ಕೊಣ್ಣಾಳ-II | ಗೃಹ ಮಂಡಳಿ | 80 | 74 | 70 | 4 | 0 | 0 | |
| | | ಮುದ್ದೇಬಿಹಾಳ | 13 ಗಂಗೂರ | ಗೃಹ ಮಂಡಳಿ | 41 | 22 | 22 | 0 | 0 | 0 | |
| | | | 14 ಹಡಗಿನಾಳ | ಟಿವಿ-9 | 71 | 10 | 9 | 1 | 0 | 0 | |
| | | | 15 ಬೋಳವಾಡ | ಗೃಹ ಮಂಡಳಿ | 195 | 62 | 61 | 1 | 0 | 0 | |
| | | ಇಂಡಿ | 16 ನಾಗರಹಳ್ಳಿ | ನಿರ್ಮಿತಿ ಕೇಂದ್ರ ಬಿಜಾಪುರ | 55 | 18 | 18 | 0 | 0 | 0 | |
| | | | 17 ಹಾಳಳ | ನಿರ್ಮಿತಿ ಕೇಂದ್ರ ಬಿಜಾಪುರ | 269 | 104 | 104 | 0 | 0 | 0 | |
| | | | 18 ಅಗರಖೇಡ | ನಿರ್ಮಿತಿ ಕೇಂದ್ರ ಬಿಜಾಪುರ | 149 | 108 | 108 | 0 | 0 | 0 | |
| | | | 19 ಭೂಯ್ಯಾರ್ | ನಿರ್ಮಿತಿ ಕೇಂದ್ರ ಬಿಜಾಪುರ | 101 | 86 | 86 | 0 | 0 | 0 | |
| | | | 20 ನಾದ ಬಿ.ಕೆ | ಎಸ್ಸಾರ್ ಗ್ರೂಪ್ | 35 | 35 | 35 | 0 | 0 | 0 | |
| | | | 21 ಅರ್ಜುಣಗಿ ಬಿ.ಕೆ. | ಎಸ್ಸಾರ್ ಗ್ರೂಪ್ | 103 | 103 | 95 | 0 | 8 | 0 | |
| | | | 22 ಚಣೇಗಾಂವ್ | ನಿರ್ಮಿತಿ ಕೇಂದ್ರ ಚಿತ್ರದುರ್ಗ | 10 | 10 | 10 | 0 | 0 | 0 | |
| | | | 23 ದಸೂರು | ನಿರ್ಮಿತಿ ಕೇಂದ್ರ ಚಿತ್ರದುರ್ಗ | 202 | 40 | 40 | 0 | 0 | 0 | |
| | | | 24 ಉಮರಜಾ | ನಿರ್ಮಿತಿ ಕೇಂದ್ರ ಚಿತ್ರದುರ್ಗ | 77 | 40 | 40 | 0 | 0 | 0 | |
| | | | 25 ಸೀವರಗಿ | ನಿರ್ಮಿತಿ ಕೇಂದ್ರ ಚಿತ್ರದುರ್ಗ | 23 | 23 | 23 | 0 | 0 | 0 | |
| | | | 26 ಭರಗುಡಿ | ನಿರ್ಮಿತಿ ಕೇಂದ್ರ ಬೆಂಗಳೂರು | 36 | 30 | 30 | 0 | 0 | 0 | |
| | | | 27 ಚಿಕ್ಕಮಣ್ಣೂರು | ನಿರ್ಮಿತಿ ಕೇಂದ್ರ ಬೆಂಗಳೂರು | 38 | 38 | 38 | 0 | 0 | 0 | |
| | | | 28 ವಾಡೇ | ನಿರ್ಮಿತಿ ಕೇಂದ್ರ ಬಿಜಾಪುರ | 208 | 60 | 54 | 6 | 0 | 0 | |
| | | ಬಸವನ-ಬಾಗೇವಾಡಿ | 29 ಸಾತಿಹಾಳ | ಕೆಆರ್‌ಐಡಿಎಲ್ | 229 | 188 | 188 | 0 | 0 | 0 | |
| | | | 30 ರೋಣಿಹಾಳ | ಕೆಆರ್‌ಐಡಿಎಲ್ | 27 | 27 | 27 | 0 | 0 | 0 | |
| | | | 31 ನಾಗರಾಳಡೋಣ | ಗೃಹ ಮಂಡಳಿ | 166 | 80 | 80 | 0 | 0 | 0 | |
| | | ಸಿಂದಗಿ | 32 ಬಂದಿಹಾಳಡೋಣ | ಗೃಹ ಮಂಡಳಿ | 201 | 120 | 120 | 0 | 0 | 0 | |
| | | | 33 ರಾಮನಹಳ್ಳಿ | ಸೇವಾ ಭಾರತಿ | 236 | 108 | 108 | 0 | 0 | 0 | |
| | | | 34 ದೇವಣಗಾಂವ್ | ಗೃಹ ಮಂಡಳಿ | 77 | 53 | 53 | 0 | 0 | 0 | |
| 3 | ಧಾರವಾಡ | ನವಲಗುಂದ | 35 ಅಮರಗೋಳ | ನಿರ್ಮಿತಿ ಕೇಂದ್ರ ಧಾರವಾಡ | 150 | 132 | 121 | 8 | 3 | 0 | |
| | | | 36 ಗುಡಿಸಾಗರ | ನಿರ್ಮಿತಿ ಕೇಂದ್ರ ಧಾರವಾಡ | 100 | 100 | 60 | 40 | 0 | 0 | |
| | | | | ಟಿವಿ-9 | 150 | 60 | 56 | 4 | 0 | 0 | |
| | | | 37 ಅರಹಟ್ಟಿ | ಶ್ರೀ ಧರ್ಮಸ್ಥಳ | 269 | 269 | 260 | 9 | 0 | 0 | |
| | | | 38 ಕೊಂಗವಾಡ | ಶ್ರೀ ಧರ್ಮಸ್ಥಳ | 420 | 250 | 0 | 40 | 80 | 130 | |
| | | ಕುಂದಗೋಳ | 39 ಬಸಾಪುರ | ಶ್ರೀ ಧರ್ಮಸ್ಥಳ | 370 | 182 | 174 | 6 | 2 | 0 | |
| | | | 40 ಮುಳ್ಳೊಳ್ಳಿ | ನಿರ್ಮಿತಿ ಕೇಂದ್ರ | 372 | 230 | 120 | 80 | 30 | 0 | |

| ಕ್ರ. ಸಂ. | ಜಿಲ್ಲೆ | ತಾಲ್ಲೂಕು | ಗ್ರಾಮದ ಹೆಸರು | ದಾನಿಗಳ ಹೆಸರು | ಒಟ್ಟು ಮನೆಗಳ ಸಂಖ್ಯೆ | | | | | | ಷರಾ |
|---|---|---|---|---|---|---|---|---|---|---|---|
| | | | | | ಆಸರೆ ಯೋಜನೆಯಡಿ ಮಂಜೂರಾದ ಮನೆಗಳ ಸಂಖ್ಯೆ | ಪ್ರಾರಂಭವಾದ ಮನೆಗಳ ಸಂಖ್ಯೆ | ಫೌಂಡೇಶನ್ ಹಂತ | ಲಿಂಟಲ್ ಮಟ್ಟ ಮತ್ತು ಛಾವಣಿ ಹಂತ | ರೂಫ್ ಹಂತ | ಪೂರ್ಣಗೊಂಡ ಮನೆಗಳ ಸಂ. | |
| 1 | 2 | 3 | 4 | 5 | 6 | 7 | 8ಅ | 8ಆ | 8ಇ | 8ಈ | 9 |
| 4 | ಗದಗ | ರೋಣ | 41 ಬಿ.ಎಸ್.ಬೆಲೇರಿ | ಮೈಸೂರು ಸಿಟಿಜನ್ ಫೋರಂ | 389 | 200 | 155 | 30 | 15 | 0 | |
| | | | 42 ಬಸರಕೋಡ | ಮೈಸೂರು ಸಿಟಿಜನ್ ಫೋರಂ | 242 | | | | | | |
| | | | 43 ಯಾ.ಸ. ಹಡಗಲಿ | ಜೆಎಸ್‌ಡಬ್ಲ್ಯು ಸ್ಟೀಲ್/ನಿರ್ಮಿತಿ ಧಾರವಾಡ | 599 | 400 | 400 | 0 | 0 | 0 | |
| | | | 44 ಮಾಳವಾಡ | ಜೆಎಸ್‌ಡಬ್ಲ್ಯು ಸ್ಟೀಲ್, ತೋರಣಗಲ್ಲು | 600 | 435 | 435 | 0 | 0 | 0 | |
| | | | 45 ಹೊಳೆ-ಆಲೂರು | ಸೇವಾ ಭಾರತಿ | 473 | 140 | 140 | 0 | 0 | 0 | |
| | | | 46 ಹೊಳೆ ಮಣ್ಣೂರು | ನಿರ್ಮಿತಿ ಕೇಂದ್ರ ಸಿ. ಮಂಗಳೂರು | 554 | 245 | 245 | 0 | 0 | 0 | |
| | | | 47 ಅಮರಗೋಳ | ನಿರ್ಮಿತಿ ಕೇಂದ್ರ ಗದಗ | 415 | 258 | 258 | 0 | 0 | 0 | |
| | | | 48 ಗಾಡಗೋಳಿ | ನಿರ್ಮಿತಿ ಕೇಂದ್ರ ದಾವಣಗೆರೆ | 504 | 400 | 400 | 0 | 0 | 0 | |
| | | | 49 ಮೆಣಸಗಿ | ಗೃಹ ಮಂಡಳಿ | 1313 | 332 | 332 | 0 | 0 | 0 | |
| | | | 50 ಕುರುವಿನಕೊಪ್ಪ | ನಿರ್ಮಿತಿ ಕೇಂದ್ರ ಚಿಕ್ಕಮಗಳೂರು | 121 | 40 | 40 | 0 | 0 | 0 | |
| | | ನರಗುಂದ | 51 ಸುರಕೋಡ | ಗೃಹ ಮಂಡಳಿ | 648 | 10 | 10 | 0 | 0 | 0 | |
| | | | 52 ಕುರ್ಲಗೇರಿ | ನಿರ್ಮಿತಿ ಕೇಂದ್ರ ಶಿವಮೊಗ್ಗ | 458 | 350 | 350 | 0 | 0 | 0 | |
| | | | 53 ಬೂದಿಹಾಳ | ನಿರ್ಮಿತಿ ಕೇಂದ್ರ ಶಿವಮೊಗ್ಗ | 174 | 174 | 174 | 0 | 0 | 0 | |
| 5 | ಹಾವೇರಿ | ಹಾವೇರಿ | 54 ಕಾಟಾರ್ | ಶಂಕರ್‌ನಾರಾಯಣ್ ಕಂ. | 250 | 200 | 120 | 69 | 11 | 0 | |
| | | | 55 ಮಣ್ಣೂರು | ಟಾಟಾ ರಿಲೀಫ್ ಕಮಿಟಿ | 144 | 85 | 85 | 0 | 0 | 0 | |
| 6 | ಕಾರವಾರ | ಕಾರವಾರ | 56 ಕಾಗವಾಡ | ಸೇವಾ ಭಾರತಿ | 50 | 50 | 35 | 15 | 0 | 0 | |
| 7 | ಗುಲಬರ್ಗಾ | ಚಿತ್ತಾಪುರ | 57 ಬಳವಡಗಿ | ಇನ್ಫೋಸಿಸ್ | 108 | 108 | 0 | 45 | 63 | 0 | |
| | | | 58 ಸೂಗೂರು ಎನ್ | ಇನ್ಫೋಸಿಸ್ | 71 | 71 | 31 | 40 | 0 | 0 | |
| | | | 59 ಕಡಬೂರು | ಇನ್ಫೋಸಿಸ್ | 60 | 60 | 0 | 0 | 0 | 0 | |
| | | | 60 ಪೈಲಿತಾಂಡ | ಎಸಿಸಿ ಸಿಮೆಂಟ್ ವಾಡಿ | 50 | 32 | 10 | 8 | 0 | 4 | |
| | | ಸೇಡಂ | 61 ಬಟಗೇರಾ ಕೆ | ಇನ್ಫೋಸಿಸ್ | 56 | 56 | 5 | 21 | 30 | 0 | |
| | | | 62 ಆಡಕಿ | ಇನ್ಫೋಸಿಸ್ | 26 | 26 | 18 | 8 | 0 | 0 | |
| | | | 63 ಸೇಡಂ ಪಟ್ಟಣ | ಇನ್ಫೋಸಿಸ್ | 191 | 50 | 50 | 0 | 0 | 0 | |
| | | ಅಫಜಲಪೂರ | 64 ಕುಡಿಗನೂರು | ಇನ್ಫೋಸಿಸ್ | 171 | 100 | 100 | 0 | 0 | 0 | |
| | | | 65 ಮಣ್ಣೂರು | ಇನ್ಫೋಸಿಸ್ | 149 | 90 | 72 | 15 | 3 | 0 | |
| | | | 66 ಶಿವೂರು | ಇನ್ಫೋಸಿಸ್ | 37 | 37 | 0 | 27 | 10 | 0 | |
| | | | 67 ಟಾಕಳಿ | ಕೆಆರ್‌ಐಡಿಎಲ್ | 82 | 50 | 50 | 0 | 0 | 0 | |
| | | | 68 ಉಡಚಾಣ | ಕೆಆರ್‌ಐಡಿಎಲ್ | 123 | 60 | 60 | 0 | 0 | 0 | |
| | | | 69 ದೋಸಗ | ಕೆಆರ್‌ಐಡಿಎಲ್ | 42 | 42 | 42 | 0 | 0 | 0 | |
| | | | 70 ಕಲ್ಲೂರು | ಕೆಆರ್‌ಐಡಿಎಲ್ | 88 | 40 | 40 | 0 | 0 | 0 | |
| | | | 71 ಶಿವಪುರ | ಕೆಆರ್‌ಐಡಿಎಲ್ | 21 | 10 | 10 | 0 | 0 | 0 | |
| | | | 72 ಕೋಳನೂರು | ಕೆಆರ್‌ಐಡಿಎಲ್ | 21 | 15 | 15 | 0 | 0 | 0 | |
| | | | 73 ಹಾವಳಗಿ | ಕೆಆರ್‌ಐಡಿಎಲ್ | 23 | 10 | 10 | 0 | 0 | 0 | |
| | | | 74 ಇಂಚಗೇರಾ | ಕೆಆರ್‌ಐಡಿಎಲ್ | 22 | 10 | 10 | 0 | 0 | 0 | |
| | | | 75 ತೆಲ್ಲೂರು | ಕೆಆರ್‌ಐಡಿಎಲ್ | 26 | 10 | 10 | 0 | 0 | 0 | |
| | | | 76 ಗೋಳನೂರು | ಕೆಆರ್‌ಐಡಿಎಲ್ | 21 | 15 | 15 | 0 | 0 | 0 | |
| | | | 77 ಘತ್ತರಗ | ಕೆಆರ್‌ಐಡಿಎಲ್ | 24 | 10 | 10 | 0 | 0 | 0 | |
| | | ಗುಲಬರ್ಗಾ | 78 ಫಿರೋಜಾಬಾದ್ | ಇನ್ಫೋಸಿಸ್ | 100 | 100 | 30 | 30 | 24 | 16 | |
| | | | 79 ಅವರಾದ್ (ಕೆ) | ಇನ್ಫೋಸಿಸ್ | 210 | 195 | 112 | 55 | 28 | 0 | |
| | | | 80 ಹಾಗರಗುಂಡಗಿ | ಇನ್ಫೋಸಿಸ್ | 69 | 69 | 69 | 0 | 0 | 0 | |
| | | ಜೇವರ್ಗಿ | 81 ಕೂಡಿ | ಶ್ರೀ ಪೇಜಾವರ ಮಠ | 40 | 40 | 30 | 0 | 2 | 8 | |

| ಕ್ರ ಸಂ. | ಜಿಲ್ಲೆ | ತಾಲ್ಲೂಕು | ಗ್ರಾಮದ ಹೆಸರು | ದಾನಿಗಳ ಹೆಸರು | ಒಟ್ಟು ಮನೆಗಳ ಸಂಖ್ಯೆ | | | | | | ಷರಾ |
|---|---|---|---|---|---|---|---|---|---|---|---|
| | | | | | ಜಿಲ್ಲಾಡಳಿತದಿಂದ ಗುರುತಿಸಿದ ಮನೆ ಸಂಖ್ಯೆ | ದಾನಿಗಳು ಒಪ್ಪಿದ ಸಂಖ್ಯೆ | ಫೌಂಡೇಷನ್ ಹಂತ | ಲಿಂಟಲ್ ಮಟ್ಟ ಪೂರ್ಣ ಹಂತ | ರೂಫ್ ಹಂತ | ಪೂರ್ಣಗೊಂಡ ಮನೆಗಳು | |
| 1 | 2 | 3 | 4 | 5 | 6 | 7 | 8ಎ | 8ಬಿ | 8ಸಿ | 8ಡಿ | 9 |
| | | | 82 ಕೋಡಾಳ | ಶ್ರೀ ಪೇಜಾವರ ಮಠ | 55 | 55 | 55 | 0 | 0 | 0 | |
| | | | 83 ಕಟ್ಟಿಸಂಗಾವಿ | ಕೆಆರ್‌ಐಡಿಎಲ್ | 73 | 55 | 55 | 0 | 0 | 0 | |
| | | | 84 ಇಟಗಾ | ಕೆಆರ್‌ಐಡಿಎಲ್ | 30 | 30 | 30 | 0 | 0 | 0 | |
| | | | 85 ಹರವಾಳ | ಕೆಆರ್‌ಐಡಿಎಲ್ | 141 | 125 | 125 | 0 | 0 | 0 | |
| | | | 86 ಬಳ್ಳುಂಡಗಿ | ಕೆಆರ್‌ಐಡಿಎಲ್ | 42 | 42 | 42 | 0 | 0 | 0 | |
| | | | 87 ನರಿಬೋಳ | ಕೆಆರ್‌ಐಡಿಎಲ್ | 29 | 10 | 10 | 0 | 0 | 0 | |
| | | | 88 ಹಂದನೂರು | ಕೆಆರ್‌ಐಡಿಎಲ್ | 62 | 30 | 30 | 0 | 0 | 0 | |
| | | | 89 ದಾಸಗಾಗಿ | ಕೆಆರ್‌ಐಡಿಎಲ್ | 7 | 7 | 7 | 0 | 0 | 0 | |
| | | | 90 ಮಂದರವಾಡ | ಕೆಆರ್‌ಐಡಿಎಲ್ | 98 | 70 | 70 | 0 | 0 | 0 | |
| | | | 91 ರದ್ದೇವಾಡಗಿ | ಕೆಆರ್‌ಐಡಿಎಲ್ | 35 | 35 | 25 | 0 | 0 | 0 | |
| | | | 92 ಜಾಕಾಪುರ ಎಸ್‌ವೈ | ಕೆಆರ್‌ಐಡಿಎಲ್ | 133 | 133 | 133 | 0 | 0 | 0 | |
| | | | 93 ಹೊನ್ನಾಳ | ಕೆಆರ್‌ಐಡಿಎಲ್ | 10 | 10 | 10 | 0 | 0 | 0 | |
| | | | 94 ಮಲ್ಲಾ ಕೆ | ಕೆಆರ್‌ಐಡಿಎಲ್ | 8 | 8 | 8 | 0 | 0 | 0 | |
| | | | 95 ಮಲ್ಲಾ ಬಿ | ಕೆಆರ್‌ಐಡಿಎಲ್ | 9 | 9 | 9 | 0 | 0 | 0 | |
| | | | 96 ಕೋನಹಿಪ್ಪರಗಾ | ಶ್ರೀ ಪೇಜಾವರ ಮಠ | 30 | 30 | 30 | 0 | 0 | 0 | |
| 8 | ಯಾದಗಿರಿ | ಯಾದಗಿರಿ | 97 ಅನೂರು (ಕೆ) | ಇನ್ಫೋಸಿಸ್ | 239 | 239 | 235 | 4 | 0 | 0 | |
| | | ಶಹಾಪುರ | 98 ಗೌಡೂರು | ಇನ್ಫೋಸಿಸ್ | 44 | 50 | 24 | 21 | 5 | 0 | |
| | | ಸುರಪುರ | 99 ಬಂಡೋಳ್ಳಿ | ಕೆಆರ್‌ಐಡಿಎಲ್ | 186 | 186 | 186 | 0 | 0 | 0 | |
| | | | 100 ಉಪ್ಪಲದಿನ್ನಿ | ಕೆಆರ್‌ಐಡಿಎಲ್ | 92 | 92 | 92 | 0 | 0 | 0 | |
| | | | 101 ತಿಂಥಣಿ | ಕೆಆರ್‌ಐಡಿಎಲ್ | 137 | 137 | 137 | 0 | 0 | 0 | |
| 9 | ಬೀದರ್ | ಬೀದರ್ | 102 ಬೀದರ್ ಸ್ಲಂ | ಕೆಆರ್‌ಐಡಿಎಲ್ | 200 | 140 | 140 | 0 | 0 | 0 | |
| | | | 103 ಚಾಬಳ | ಕೆಆರ್‌ಐಡಿಎಲ್ | 21 | 64 | 64 | 0 | 0 | 0 | |
| | | ಔರಾದ್ | 104 ಮನೆಗೆಂಪೂರ | ಕೆಆರ್‌ಐಡಿಎಲ್ | 48 | | | | | | |
| 10 | ರಾಯಚೂರು | ರಾಯಚೂರು | 105 ಕಟಕನೂರ | ಇಸ್ಕೋ ಬೆಂಗಳೂರು | 350 | 230 | 179 | 50 | 0 | 1 | |
| | | | 106 ಚಿಕ್ಕಮಂಚಾಲಿ | ಇಸ್ಕೋ ಬೆಂಗಳೂರು | 325 | 150 | 134 | 15 | 0 | 1 | |
| | | | 107 ಬಿಚ್ಚಾಲಿ ಮತ್ತು ಕ್ಯಾಂಪ್ | ಇಸ್ಕೋ ಬೆಂಗಳೂರು | 1120 | 370 | 369 | 0 | 0 | 1 | |
| | | | 108 ಎನ್. ಮಲ್ಲಾಪುರ | ಇಸ್ಕೋ ಬೆಂಗಳೂರು | 350 | 325 | 0 | 189 | 135 | 1 | |
| | | | 109 ತಲಮಾರಿ | ಇಸ್ಕೋ ಬೆಂಗಳೂರು | 1425 | 200 | 200 | 0 | 0 | 0 | |
| | | | 110 ಉಪ್ರಾಳ | ಹುಳಿಸಿ ಗೋಪಾಲ್, ಬೆಂಗಳೂರು | 203 | 203 | 198 | 5 | 0 | 0 | |
| | | | 111 ಜಾಗೀರ ವೆಂಕಟಾಪುರ | ಹೋಪ್ ಫೌಂಡೇಷನ್ | 150 | 90 | 0 | 0 | 10 | 80 | |
| | | | 112 ಕೂರ್ವಕುರ್ದ | ಮಾತಾ ಅಮೃತಾನಂದಮಯಿ | 285 | 242 | 0 | 0 | 0 | 242 | |
| | | | 113 ಮಾಂಗಿಗಡ್ಡ | ಮಾತಾ ಅಮೃತಾನಂದಮಯಿ | 103 | | | | | | |
| | | | 114 ಕೂರ್ವಕಲಾ | ಮಾತಾ ಅಮೃತಾನಂದಮಯಿ | 253 | 160 | 90 | 20 | 50 | 0 | |
| | | | 115 ಅಗ್ರಹಾರ | ಮಾತಾ ಅಮೃತಾನಂದಮಯಿ | 25 | | | | | | |
| | | | 116 ರಘುನಾಥಹಳ್ಳಿ | ಭಾರತಿ ಏರ್‌ಟೆಲ್ ಬೆಂಗಳೂರು | 150 | 30 | 30 | 0 | 0 | 0 | |
| | | | 117 ದುಗನೂರು | ಹುಳಿಸಿ ಗೋಪಾಲ್, ಬೆಂಗಳೂರು | 229 | 229 | 214 | 15 | 0 | 0 | |
| | | | 118 ಎನ್ ಹನುಮಾಪುರ | ಚಂದ್ರಶೇಖರ ಸ್ವಾಮೀಜಿ | 318 | 25 | 25 | 0 | 0 | 0 | |
| | | ಲಿಂಗಸಗೂರು | 119 ಕಲಾಪುರ | ಟಾಟಾ ರಿಲೀಫ್ ಕಮಿಟಿ | 36 | 36 | 36 | 0 | 0 | 0 | |
| | | | 120 ಸುಂಕಲ | ಹಟ್ಟಿ ಗೋಲ್ಡ್ ಮೈನ್ಸ್ | 300 | 65 | 65 | 0 | 0 | 0 | |
| | | | 121 ಚಿಕ್ಕಉಪ್ಪೇರಿ | ಹಟ್ಟಿ ಗೋಲ್ಡ್ ಮೈನ್ಸ್ | 150 | 60 | 60 | 0 | 0 | 0 | |
| | | ದೇವದುರ್ಗ | 122 ಹಿರೇಕೂಡ್ಲಗಿ | ಎಂಆರ್‌ಪಿಎಲ್ ಮಂಗಳೂರು | 50 | 40 | 40 | 0 | 0 | 0 | |

| ಕ್ರ ಸಂ. | ಜಿಲ್ಲೆ | ತಾಲ್ಲೂಕು | ಗ್ರಾಮದ ಹೆಸರು | ದಾನಿಗಳ ಹೆಸರು | ಒಟ್ಟು ಮನೆಗಳ ಸಂಖ್ಯೆ | | | | | | ಷರಾ |
|---|---|---|---|---|---|---|---|---|---|---|---|
| | | | | | ಅಗತ್ಯವಿರುವ ಮನೆಗಳ ಸಂಖ್ಯೆ | ಪ್ರಾರಂಭಿಸಿದ ಮನೆಗಳ ಸಂಖ್ಯೆ | ಫೌಂಡೇಶನ್ ಹಂತ | ಲಿಂಟಲ್ ಮಟ್ಟ ಹಂತ | ರೂಫ್ ಹಂತ | ಪೂರ್ಣಗೊಂಡ ಮನೆಗಳು | |
| 1 | 2 | 3 | 4 | 5 | 6 | 7 | 8ಎ | 8ಬಿ | 8ಸಿ | 8ಡಿ | 9 |
| | | | 123 ಗೋವಿಂದಪಳ್ಳಿ | ಮಹೀಂದ್ರಾ ಕಾರ್ಪೋರೇಷನ್ ಬೆಂಗಳೂರು | 146 | 108 | 108 | 0 | 0 | 0 | |
| | | | 124 ಸೂಲದಗುಡ್ಡ | ಎಂಆರ್‌ಪಿಎಲ್ ಮಂಗಳೂರು | 60 | 45 | 45 | 0 | 0 | 0 | |
| | | | 125 ಅಪ್ಪಾಳ | ಸೇವಾ ಭಾರತಿ | 52 | 52 | 40 | 12 | 0 | 0 | |
| | | | 126 ವೀರಗೋಟ | ಎಂಆರ್‌ಪಿಎಲ್ ಮಂಗಳೂರು | 103 | 65 | 65 | 0 | 0 | 0 | |
| | | | 127 ಕರ್ಕಿಹಳ್ಳಿ | ಎಂಆರ್‌ಪಿಎಲ್ ಮಂಗಳೂರು | 117 | 40 | 40 | 0 | 0 | 0 | |
| | | | 128 ಮ್ಯಾದರಗೋಳ | ಹಟ್ಟಿ ಗೋಲ್ಡ್ ಮೈನ್ಸ್ | 90 | 30 | 30 | 0 | 0 | 0 | |
| | | | 129 ಮದರಕಲ್ | ಹಟ್ಟಿ ಗೋಲ್ಡ್ ಮೈನ್ಸ್ | 100 | 30 | 30 | 0 | 0 | 0 | |
| | | | 130 ಹೇರುಂಡಿ | ಹಟ್ಟಿ ಗೋಲ್ಡ್ ಮೈನ್ಸ್ | 159 | 50 | 50 | 0 | 0 | 0 | |
| | | ಸಿಂಧನೂರು | 131 ಹುಲುಗುಂಚಿ | ಬೆಮೆಲ್ ಬೆಂಗಳೂರು | 216 | 150 | 150 | 0 | 0 | 0 | |
| | | | 132 ಹಡಗಿನಾಳ | ಬೆಮೆಲ್ ಬೆಂಗಳೂರು | 130 | 120 | 120 | 0 | 0 | 0 | |
| | | | 133 ಬಂಡಿಹನುಮಾನದೊಡ್ಡಿ | ರಾಮಕೃಷ್ಣ ಆಶ್ರಮ | 146 | 80 | 80 | 0 | 0 | 0 | |
| | | | 134 ಒಳಬಳ್ಳಾರಿ | ಆದಿಚುಂಚನಗಿರಿ ಮಠ | 343 | 50 | 50 | 0 | 0 | 0 | |
| | | ಮಾನ್ವಿ | 135 ಉಮಳಿಹೊಸೂರು | ಶ್ರೀ ಸಿದ್ಧಗಂಗಾ ಮಠ | 199 | 199 | 99 | 70 | 40 | 0 | |
| | | | 136 ಚಿರಾಲದಿನ್ನಿ | ಕಮ್ಮವಾರಿ ಸಂಘ | 243 | 180 | 180 | 0 | 0 | 0 | |
| | | | 137 ಜೂಕೂರು | ಕಮ್ಮವಾರಿ ಸಂಘ | 250 | 100 | 100 | 0 | 0 | 0 | |
| | | | 138 ಚೀಕಲಪರವಿ | ಕಟ್ಟಾ ಫೌಂಡೇಷನ್ | 554 | 240 | 240 | 0 | 0 | 0 | |
| | | | 139 ದೇವಿಪುರ | ಕಟ್ಟಾ ಫೌಂಡೇಷನ್ | 138 | 97 | 97 | 0 | 0 | 0 | |
| | | | 140 ದದ್ದಲ | ಟಾಟಾ ರಿಲೀಫ್ ಕಮಿಟಿ | 177 | 177 | 177 | 0 | 0 | 0 | |
| | | | 141 ಅರಹಳ್ಳಿ | ಹಟ್ಟಿ ಗೋಲ್ಡ್ ಮೈನ್ಸ್ | 215 | 30 | 30 | 0 | 0 | 0 | |
| | | | 142 ಖಾತರಕಿ | ಕಟ್ಟಾ ಫೌಂಡೇಷನ್ | 356 | 200 | 190 | 10 | 0 | 0 | |
| 11 | ಬಳ್ಳಾರಿ | ಸಿರುಗುಪ್ಪ | 143 ಮಾಟೂರು | ಬಿಎಂಎಂ ಗ್ರೂಪ್ಸ್, ಬಳ್ಳಾರಿ | 350 | 200 | 77 | 29 | 6 | 88 | |
| | | | 144 ಟಿ.ಎಸ್. ಕಡ್ಲೂರು | ಬಿಎಂಎಂ ಗ್ರೂಪ್ಸ್, ಬಳ್ಳಾರಿ | 650 | 580 | 194 | 155 | 69 | 162 | |
| | | | 145 ಹಚ್ಚೊಳ್ಳಿ | ವಿ.ಎಸ್. ಲಾಡ್, ಸಂಡೂರು | 1200 | 110 | 64 | 34 | 2 | 10 | |
| | | | 146 ಚಿಕ್ಕಬಳ್ಳಾರಿ | ವೆಸ್ಕೋ, ಸಂಡೂರು | 760 | 200 | 81 | 95 | 20 | 4 | |
| | | | 147 ಶ್ರೀಧರಗಡ್ಡ | ವೆಸ್ಕೋ, ಸಂಡೂರು | 550 | 474 | 349 | 58 | 45 | 22 | |
| | | | 148 ಗುಂಡಿಗನೂರು | ಕನ್ನಯ್ಯಲಾಲ್ ದುಧೇರಿಯ ಮೈನ್ಸ್ | 200 | 200 | 2 | 154 | 22 | 22 | |
| | | | 149 ಹಳೇನಡವಿ | ಹೆಚ್.ರಂಗನಗೌಡ ಮೈನ್ಸ್ | 400 | 200 | 106 | 36 | 16 | 42 | |
| | | | 150 ಹೊನ್ನಾರಹಳ್ಳಿ | ಎಸ್‌ಎಂಐಓಆರ್‌ಇ ಸಂಡೂರು | 250 | 10 | 10 | 0 | 0 | 0 | |
| | | | 151 ಮೈಲಾಪುರ ಜಾಲ ಕ್ಯಾಂ | ಎಸ್‌ಎಂಐಓಆರ್‌ಇ ಸಂಡೂರು | 50 | 5 | 5 | 0 | 0 | 0 | |
| | | | 152 ಮುದ್ದಟನೂರು | ಎಸ್‌ಎಂಐಓಆರ್‌ಇ ಸಂಡೂರು | 200 | 10 | 10 | 0 | 0 | 0 | |
| | | | 153 ಹೇರಕಲ್ | ಎಸ್‌ಎಂಐಓಆರ್‌ಇ ಸಂಡೂರು | 50 | 5 | 5 | 0 | 0 | 0 | |
| | | | 154 ಹಳೇಹಾವಿನಾಳ | ಹೊಸ್ಪೂರ್ ಟ್ರೇಡರ್ಸ್ | 232 | 30 | 30 | 0 | 0 | 0 | |
| | | | 155 ಮುದೇನೂರು | ಹೊಸ್ಪೂರ್ ಟ್ರೇಡರ್ಸ್ | 324 | 10 | 10 | 0 | 0 | 0 | |
| | | | 156 ಕೊತ್ತಲಚಿಂತಾ | ಕೆಎಂಎಂಐ ಹೊಸಪೇಟೆ | 395 | 10 | 10 | 0 | 0 | 0 | |
| | | | 157 ಮದಲಘಟ್ಟ | ಕೆಎಂಎಂಐ ಹೊಸಪೇಟೆ | 50 | 5 | 5 | 0 | 0 | 0 | |
| | | ಹಡಗಲಿ | 158 ಮಾಗಳ | ಅಂಬಿಕಾ ಮೈನ್ಸ್, ಸಂಡೂರು | 500 | 280 | 280 | 0 | 0 | 0 | |
| 12 | ಕೊಪ್ಪಳ | ಕೊಪ್ಪಳ | 159 ಹಿರೇಸಿಂಧೋಗಿ | ಕಲ್ಯಾಣಿ ಚಾರಿಟಬಲ್ ಟ್ರಸ್ಟ್ | 385 | 100 | 34 | 26 | 40 | 0 | |
| | | | 160 ಕೋಳೂರು | ಬೊರುಕಾ ಪವರ್ ಕಾರ್ಪೋರೇಷನ್ | 106 | 106 | 93 | 0 | 0 | 0 | |
| | | | 161 ಗುನ್ನಹಳ್ಳಿ | ಕೆಆರ್‌ಐಡಿಎಲ್ | 54 | 54 | 0 | 28 | 26 | 0 | |
| | | | 162 ಕಾಟ್ರಳ್ಳಿ | ಕೆಆರ್‌ಐಡಿಎಲ್ | 41 | 41 | 41 | 0 | 0 | 0 | |
| | | | 163 ಇರಕಲಘಡ | ಕೆಆರ್‌ಐಡಿಎಲ್ | 176 | 52 | 35 | 0 | 0 | 0 | |

| ಕ್ರ ಸಂ | ಜಿಲ್ಲೆ | ತಾಲ್ಲೂಕು | ಗ್ರಾಮದ ಹೆಸರು | ದಾನಿಯ ಹೆಸರು | ಒಟ್ಟು ಮನೆಗಳ ಸಂಖ್ಯೆ | | | | | | ಷರಾ |
|---|---|---|---|---|---|---|---|---|---|---|---|
| | | | | | ಒಪ್ಪಂದದ ಪ್ರಕಾರ ಮನೆಗಳ ಸಂಖ್ಯೆ | ಪ್ರಾರಂಭವಾದ ಮನೆಗಳ ಸಂಖ್ಯೆ | ಫೌಂಡೇಶನ್ ಹಂತ | ಲಿಂಟಲ್ ಮಟ್ಟ ಮತ್ತು ಹಂತ | ರೂಫ್ ಹಂತ | ಪೂರ್ಣಗೊಂಡ ಮನೆಗಳು | |
| 1 | 2 | 3 | 4 | 5 | 6 | 7 | 8ಎ | 8ಬಿ | 8ಸಿ | 8ಡಿ | 9 |
| | | | 164 ಚಿಕ್ಕಸಿಂಧೋಗಿ | ಕೆಆರ್‌ಐಡಿಎಲ್ | 60 | 60 | 25 | 35 | 0 | 0 | |
| | | | 165 ಮಾದಿನೂರು | ಕೆಆರ್‌ಐಡಿಎಲ್ | 179 | 92 | 20 | 0 | 0 | 0 | |
| | | | 166 ನರೇಗಲ್ಲ | ಕೆಆರ್‌ಐಡಿಎಲ್ | 426 | 18 | 0 | 0 | 0 | 0 | |
| | | ಕುಷ್ಟಗಿ | 167 ವಣ್ಣನದುರ್ಗ | ಕೆಆರ್‌ಐಡಿಎಲ್ | 130 | 115 | 40 | 0 | 0 | 0 | |
| | | ಗಂಗಾವತಿ | 168 ಕಕ್ಕರಗೋಳ | ಜಿಂದಾಲ್ ಸ್ಟೀಲ್ | 103 | 103 | 97 | 6 | 0 | 0 | |
| | | | 169 ಕುಂಟೋಜಿ | ಜಿಂದಾಲ್ ಸ್ಟೀಲ್ | 467 | 330 | 178 | 47 | 5 | 0 | |
| | | | 170 ಕರಡೋಣ | ಜೆಎಸ್‌ಡಬ್ಲ್ಯು | 243 | 200 | 59 | 0 | 0 | 0 | |
| | | | 171 ಹಾಲಿಗನೂರು | ಜೆಎಸ್‌ಡಬ್ಲ್ಯು | 87 | 79 | 79 | 0 | 0 | 0 | |
| 13 | ಬಾಗಲಕೋಟೆ | ಬಾದಾಮಿ | 172 ಶಿರಬಡಗಿ | ಆರ್‌ಸಿ ಫೌಂಡೇಷನ್ | 293 | 233 | 146 | 2 | 5 | 80 | |
| | | | 173 ಮಂಗಳಗುಡ್ಡ | ಬಯೋಕಾನ್ | 411 | 9 | 6 | 0 | 1 | 2 | |
| | | | 174 ಆಲೂರು ಎಸ್.ಕೆ. | ಕಾಫಿ ಡೇ | 180 | 180 | 87 | 20 | 72 | 1 | |
| | | | 175 ಬ್ಯಾಡ | ಮೈಸೂರು ಸಿಟಿಜನ್ ಫೋರಂ | 400 | 70 | 50 | 0 | 20 | 0 | |
| | | | 176 ಸಬ್ಬಲಹುಣಸಿ | ಸೇವಾ ಭಾರತಿ | 77 | 74 | 53 | 20 | 0 | 1 | |
| | | | 177 ಆಲೂರು ಎಸ್.ಪಿ | ಸೇವಾ ಭಾರತಿ | 209 | 107 | 107 | 0 | 0 | 0 | |
| | | | 178 ಹಿರೇನಸಬಿ | ಗೃಹ ಮಂಡಳಿ | 81 | 81 | 81 | 0 | 0 | 0 | |
| | | | 179 ಹುಳ್ಳ | ಗೃಹ ಮಂಡಳಿ | 349 | 265 | 262 | 3 | 0 | 0 | |
| | | | 180 ಗೋನಾಳ | ಗೃಹ ಮಂಡಳಿ | 70 | 55 | 55 | 0 | 0 | 0 | |
| | | | 181 ನೀರಲಗಿ | ಗೃಹ ಮಂಡಳಿ | 202 | 186 | 156 | 30 | 0 | 0 | |
| | | | 182 ಕಳಸ | ಕೆಆರ್‌ಐಡಿಎಲ್ | 140 | 140 | 120 | 20 | 0 | 0 | |
| | | | 183 ಮುಮ್ಮರಡಿಕೊಪ್ಪ | ಕೆಆರ್‌ಐಡಿಎಲ್ | 177 | 177 | 167 | 10 | 0 | 0 | |
| | | | 184 ಹಾಗನೂರು | ಕೆಆರ್‌ಐಡಿಎಲ್ | 189 | 189 | 169 | 20 | 0 | 0 | |
| | | | 185 ನೇದಲಗಿ | ಗೃಹ ಮಂಡಳಿ | 198 | 44 | 44 | 0 | 0 | 0 | |
| | | | 186 ಬಿಎನ್ ಜಾಲಿಹಾಳ | ಕೆಆರ್‌ಐಡಿಎಲ್ | 50 | 26 | 26 | 0 | 0 | 0 | |
| | | | 187 ಗುಳೇದಗುಡ್ಡ ತಾಂಡ | ಕೆಆರ್‌ಐಡಿಎಲ್ | 55 | 55 | 50 | 5 | 0 | 0 | |
| | | | 188 ಚೋಳಚಗುಡ್ಡ | ಕ್ರೆಡಾಯ್ ಕರ್ನಾಟಕ | 283 | 40 | 40 | 0 | 0 | 0 | |
| | | ಹುನಗುಂದ | 189 ಕಮತಗಿ | ಕ್ರೆಡಾಯ್ ಕರ್ನಾಟಕ | 145 | 63 | 63 | 0 | 0 | 0 | |
| | | | 190 ಹಿರೇಮಾಗಿ | ಕ್ರೆಡಾಯ್ ಕರ್ನಾಟಕ | 386 | 44 | 34 | 5 | 0 | 5 | |
| | | | 191 ಇನಾಂಬೂದಿಹಾಳ | ಸೇವಾ ಭಾರತಿ | 92 | 92 | 71 | 20 | 0 | 1 | |
| | | | 192 ನಂದನೂರು | ಮೈಸೂರು ಸಿಟಿಜನ್ ಫೋರಂ | 107 | 107 | 21 | 56 | 29 | 1 | |
| | | | 193 ಸುರಳಿಕಲ್ | ಗೃಹ ಮಂಡಳಿ | 226 | 61 | 61 | 0 | 0 | 0 | |
| | | | 194 ಬೇವಿನಾಳ | ಗೃಹ ಮಂಡಳಿ | 264 | 65 | 65 | 0 | 0 | 0 | |
| | | | 195 ವೈರಭಾವಿ | ಆರ್ಟ್ ಆಫ್ ಲಿವಿಂಗ್ | 140 | 75 | 75 | 0 | 0 | 0 | |
| | | | 196 ಚಿಕ್ಕಮಾಗಿ | ನಿರ್ಮಿತಿ ಕೇಂದ್ರ ಬಾಗಲಕೋಟೆ | 417 | 142 | 103 | 39 | 0 | 0 | |
| | | | 197 ಚಿತ್ತರಗಿ | ನಿರ್ಮಿತಿ ಕೇಂದ್ರ ಬಾಗಲಕೋಟೆ | 640 | 280 | 273 | 7 | 0 | 0 | |
| | | | 198 ಹಾವರಗಿ | ಸೇವಾ ಭಾರತಿ | 67 | 25 | 25 | 0 | 0 | 0 | |
| | | ಮುಧೋಳ | 199 ಒಂಟಗೋಡಿ | ಗೃಹ ಮಂಡಳಿ | 404 | 367 | 365 | 0 | 2 | 0 | |
| 14 | ದಾವಣಗೆರೆ | ಹರಪ್ಪನಹಳ್ಳಿ | 200 ಹರಪ್ಪನಹಳ್ಳಿ ಪಟ್ಟಣ | ಗೋವಿಂದ ಪ್ರಸಾದ್ ಫೌಂಡೇಶನ್ | 540 | 209 | 103 | 13 | 73 | 72 | |
| | | ಹರಿಹರ | 201 ಹಾಳ್ಯ | ಕೆಆರ್‌ಐಡಿಎಲ್ | 111 | 111 | 111 | 0 | 0 | 0 | |
| | | | | ಒಟ್ಟು | **41948** | **21762** | **17164** | **2079** | **1138** | **997** | |